# ಜನತಾವಾಣಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ನವೆಂಬರ್ 18, 2021

ಸಂಪುಟ : 48 ಸಂಚಿಕೆ : 187 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


# ಡಿಕೆಶಿ-ಸಿದ್ದು ನಡುವಿನ ಬೇಗುದಿ ಸ್ಫೋಟ

## ವಿಧಾನ ಪರಿಷತ್ 25 ಸ್ಥಾನಗಳ ಅಭ್ಯರ್ಥಿಗಳ ಆಯ್ಕೆಯಲ್ಲಿ ತೊಡಕು

**ಪರಿಷತ್ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಪ್ರತ್ಯೇಕವಾಗಿ ಸಭೆಗಳನ್ನು ನಡೆಸಿ, ತಮ್ಮ ಬೆಂಬಲಿಗರನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದಾರೆ**

ಬೆಂಗಳೂರು, ನ. 17 - ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ನಡುವಿನ ಬೇಗುದಿ ಸ್ಫೋಟಗೊಂಡಿದೆ.

ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿನ 25 ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ವಿಷಯ, ಪಕ್ಷ ಸಂಘಟನೆಯ ಸಭೆಗಳಲ್ಲಿ ಪರಸ್ಪರ ನಾಯಕರ ಬೆಂಬಲಿಗರು ಪರ ವಿರೋಧ ಘೋಷಣೆ ನಿರಂತರವಾಗಿ ನಡೆದಿದೆ.

ಎಲ್ಲದಕ್ಕೂ ಮಿಗಿಲಾಗಿ ನಿನ್ನೆ ನಡೆದ ರಾಜ್ಯ ಘಟಕದ ಅಲ್ಪಸಂಖ್ಯಾತರ ಪದಗ್ರಹಣ ಸಮಾರಂಭದಲ್ಲಿ ಉಭಯ ನಾಯಕರ ಬೇಗುದಿ ಮತ್ತೆ ಬಯಲಾಗಿದೆ.

ಇತ್ತೀಚಿನ ಸಭೆಗಳಲ್ಲಿ ಸಿದ್ದರಾಮಯ್ಯ ಅವರಿಗೆ ಇರಿಸುಮುರುಸಾಗುವಂತೆ ಶಿವಕುಮಾರ್ ಬೆಂಬಲಿಗರು ತಮ್ಮ ನಾಯಕರ ಪರವಾಗಿ ಜೈಕಾರ ಹಾಕುತ್ತಿದ್ದಾರೆ.

ನಿನ್ನೆ ನಡೆದ ಅಲ್ಪಸಂಖ್ಯಾತರ ಸಭೆಯಲ್ಲೂ ಜಮೀರ್ ಅಹಮದ್ ಖಾನ್ ಹಾಗೂ ಶಾಂತಿನಗರ ಶಾಸಕ ಹ್ಯಾರಿಸ್ ಬೆಂಬಲಿಗರು ಸಿದ್ದರಾಮಯ್ಯ ಭಾಷಣ ಮಾಡುವ ಸಂದರ್ಭದಲ್ಲಿ ಶಿವಕುಮಾರ್‌ಗೆ ಜೈಕಾರ ಹಾಕಿ, ಭಾಷಣಕ್ಕೆ ಅಡ್ಡಿಯುಂಟು ಮಾಡಿದರು.

ಅಷ್ಟೇ ಅಲ್ಲ, ಸಿದ್ದರಾಮಯ್ಯ ಅವರು ಭಾಷಣವನ್ನು ಪೂರ್ಣಗೊಳಿಸಲು ಅವಕಾಶ ನೀಡದೇ ಮಧ್ಯದಲ್ಲೇ ಸಭೆಯಿಂದ ನಿರ್ಗಮಿಸುವಂತಹ ಪರಿಸ್ಥಿತಿ ನಿರ್ಮಾಣವಾಯಿತು.

ವಿಧಾನ ಪರಿಷತ್ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲೂ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಪ್ರತ್ಯೇಕವಾಗಿ ಸಭೆಗಳನ್ನು ನಡೆಸಿ, ತಮ್ಮ ಬೆಂಬಲಿಗರನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ನೆಪ ಮಾತ್ರಕ್ಕೆ ಕೆಪಿಸಿಸಿ ಕಚೇರಿಯಲ್ಲಿ ನಾಯಕರುಗಳ ಸಭೆ ನಡೆಸುವ ಈ ಧುರೀಣರು, ನಂತರ ತಮ್ಮ ಕಡೆಯುವರು ಯಾರು, ಅವರನ್ನು ಎಲ್ಲಿ ನಿಲ್ಲಿಸುವುದು ಎಂಬುದರ ಲೆಕ್ಕಾಚಾರದಲ್ಲಿ ತೊಡಗುತ್ತಾರೆ.

ಮುಂಬೈ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಶಾಸಕರು ಮತ್ತು ಕಾರ್ಯಕರ್ತರು ಶಿವಕುಮಾರ್ ಅವರನ್ನು ಕ್ಯಾರೆ ಎನ್ನುತ್ತಿಲ್ಲ. ಅವರಿಗೆ ಸಿದ್ದರಾಮಯ್ಯನವರೇ ನಾಯಕರು ಮತ್ತು ಅವರು ಹೇಳಿದ್ದೇ ವೇದ ವಾಕ್ಯ.

ಆ ಭಾಗದ ಜಿಲ್ಲೆಯ ಪ್ರಮುಖ ನಾಯಕರು ಹಾಗೂ ಶಾಸಕರು ಒಟ್ಟಾಗಿ ಬಂದು ಸಿದ್ದರಾಮಯ್ಯ ಅವರಿಗೆ ತಮ್ಮ ಕಡೆಯಿಂದ ಯಾರು ನಿಲ್ಲಬೇಕು ಎಂಬುದರ ಬಗ್ಗೆ ಚರ್ಚೆ ನಡೆಸಿ, ಮಾಹಿತಿ ನೀಡಿ ಹೋಗುತ್ತಿದ್ದಾರೆ. ಇದು ಶಿವಕುಮಾರ್ ಅವರಿಗೆ ಬಿಸಿ (2ನೇ ಪುಟಕ್ಕೆ)



# ಅಕಾಲಿಕ ಮಳೆಗೆ ನೆಲ ಕಚ್ಚಿದ ಸಾವಿರ ಎಕರೆ ಭತ್ತದ ಬೆಳೆ

ಮಲೇಬೆನ್ನೂರು, ನ.17- ಮಂಗಳವಾರ ರಾತ್ರಿ ಸುರಿದ ಭಾರೀ ಮಳೆಯಿಂದಾಗಿ ಕಟಾವಿಗೆ ಬಂದಿದ್ದ ಸುಮಾರು 1 ಸಾವಿರ ಎಕರೆ ಭತ್ತದ ಬೆಳೆ ನೆಲ ಕಚ್ಚಿದ್ದು, ಅಪಾರ ನಷ್ಟ ಸಂಭವಿಸಿದೆ.

ಈ ಬಾರಿ ಎಲ್ಲಾ ಕಡೆ ಭತ್ತದ ಬೆಳೆ ಯಾವುದೇ ರೋಗ ಬಾಧೆ ಇಲ್ಲದೆ, ಸಮೃದ್ಧಿಯಾಗಿ ಬೆಳೆದಿದ್ದವು.

ರೈತರು ಉತ್ತಮ ಇಳುವರಿಯನ್ನು ನಿರೀಕ್ಷಿಸಿದ್ದರು. ಇಂತಹ ಸಂದರ್ಭದಲ್ಲಿ ಸುರಿದ ಅಕಾಲಿಕ ಮಳೆಯಿಂದಾಗಿ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂಬಂತಾಗಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಂದಾಯ ಇಲಾಖೆ ಪ್ರಕಾರ ಮಲೇಬೆನ್ನೂರು, ಹೋಬಳಿಯ ಆದಾಪುರದಲ್ಲಿ 50, ನಿಟ್ಟೂರಿನಲ್ಲಿ 50, ಹರಳಹಳ್ಳಿಯಲ್ಲಿ 100, ಹಾಲಿವಾಣ ದಲ್ಲಿ 20, ಸಂಕ್ಲೀಪುರದಲ್ಲಿ 30, ಕುಣೆಬೆಳಕೆರೆಯಲ್ಲಿ 40, ನಂದಿತಾವರೆಯಲ್ಲಿ 35, ಬೂದಿಹಾಳ್‌ನಲ್ಲಿ 25, ಕುಂಬಳೂರಿನಲ್ಲಿ 50, ಜಿಗಳಿಯಲ್ಲಿ 50, ಯಲವಟ್ಟಿಯಲ್ಲಿ 35, ಧೂಳೆಹೊಳೆಯಲ್ಲಿ 30, ಇಂಗಳಗೊಂದಿಯಲ್ಲಿ 25, ಪಾಳ್ಯದಲ್ಲಿ 15 ಎಕರೆ ಸೇರಿದಂತೆ ಸುಮಾರು 600 ಎಕರೆ ಭತ್ತದ ಬೆಳೆ ನೆಲಕಚ್ಚಿದೆ ಎಂದು (2ನೇ ಪುಟಕ್ಕೆ)

## ಮನೆಗಳಿಗೆ ನುಗ್ಗಿದ ನೀರು ಜನಜೀವನ ಅಸ್ತವ್ಯಸ್ತ


ಹರಿಹರ, ನ.17- ನಗರದಲ್ಲಿಂದು ಧಾರಾ ಕಾರವಾಗಿ ಸುರಿದ ಮಳೆಯಿಂದಾಗಿ ಅನೇಕ ಬಡಾವಣೆಯಲ್ಲಿ ಮನೆಗಳಿಗೆ ನೀರು ನುಗ್ಗಿದ್ದರಿಂದ ಜನಜೀವನ ಅಸ್ತವ್ಯಸ್ತವಾಗಿದೆ.

ಸುಮಾರು ಮಧ್ಯಾಹ್ನ 3 ಗಂಟೆಯ ಸುಮಾರಿಗೆ ಪ್ರಾರಂಭವಾದ ಮಳೆ ಮುಕ್ಕಾಲು ಗಂಟೆಗೂ ಹೆಚ್ಚು ಕಾಲ ಧಾರಾಕಾರವಾಗಿ ಸುರಿದಿದ್ದು, ಹರಪನಹಳ್ಳಿ ರಸ್ತೆಯಲ್ಲಿ ನೀರು ಅಧಿಕವಾಗಿ ಹರಿದು ಬಂದಿದ್ದರಿಂದ ಅಂಡರ್ ಬ್ರಿಡ್ಜ್‌ನಲ್ಲಿ ವಾಹನ ಸವಾರರು ಮತ್ತು ಪಾದಚಾರಿಗಳು ಓಡಾಡಲು ಹರ ಸಾಹಸ ಪಟ್ಟರು.

ಗಾಂಧಿ ನಗರದಲ್ಲಿ ಕೆಲವು ಮನೆಗಳಿಗೆ ಮತ್ತು ಗುಜರಿ ಅಂಗಡಿಗೆ ನೀರು ನುಗ್ಗಿದ್ದರಿಂದ ನೀರನ್ನು ಹೊರಗಡೆ ಸಾಗಿಸಲು (2ನೇ ಪುಟಕ್ಕೆ)



# ಒಂದಾದರೂ ಬಸವಣ್ಣನ ವಚನ ಪಾಲಿಸಿದರೆ ಬದುಕು ಸಾರ್ಥಕ



ಬೆಂಗಳೂರು, ನ.17- ಬಸವಾದಿ ಶರಣರ ವಿಚಾರದಲ್ಲಿ ನಂಬಿಕೆ ಇದ್ದರೆ, ಲಭ್ಯವಿರುವ 21 ಸಾವಿರ ವಚನಗಳ ಪೈಕಿ ಒಂದು ವಚನವನ್ನಾದರೂ ನಮ್ಮ ಬದುಕನಲ್ಲಿ ಅಳವಡಿಸಿಕೊಂಡು ಪರಿಪಾಲಿಸಿದರೆ, ನಮ್ಮ ಬದುಕು ಸಾರ್ಥಕವಾಗುತ್ತದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮತ್ತು ರಮಣಶ್ರೀ ಪ್ರತಿಷ್ಠಾನ ಆಯೋಜಿಸಿದ್ದ ಸಮಾರಂಭದಲ್ಲಿ 16 ನೇ ವರ್ಷದ ರಮಣಶ್ರೀ ಶರಣ ಸಾಹಿತ್ಯ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡುತ್ತಿದ್ದರು.

ಬಸವಣ್ಣ ಹಿಂದೆಂದಿಗಿಂತಲೂ ಪ್ರಸ್ತುತ ಎಂದು ನಾವು ಹೇಳುತ್ತೇವೆ. ಹಾಗೆಂದರೆ, ಬಸವಣ್ಣನ ಕಾಲದಲ್ಲಿದ್ದ ಅಸ್ಪೃಶ್ಯತೆ, ಅಸಮಾನತೆ, ಲಿಂಗಭೇದ, ಮೂಢ ನಂಬಿಕೆಗಳು ಇಂದಿಗೂ ಇವೆ ಎಂದರ್ಥವಲ್ಲವೇ?. ಅವರ ವಚನ ಕೇಳಿ ನಮ್ಮ ಬದುಕಿನಲ್ಲಿ ಏನಾದರೂ ಬದಲಾವಣೆ ಮಾಡಿಕೊಳ್ಳಬೇಕು. ವಚನಗಳು ಇರುವುದು ಆಚರಿಸಲು ಕೇಳುವುದಕ್ಕಲ್ಲ. ಆದರೆ ನಾವು ವಚನಗಳನ್ನು ವಾಚಿಸುತ್ತೇವೆ. ದಯವೇ ಧರ್ಮದ ಮೂಲ, ಕಾಯಕವೇ ಕೈಲಾಸ ಎಂದು ಸರಳ ವ್ಯಾಖ್ಯಾನದಲ್ಲಿ ದೊಡ್ಡ ತಿರುಳು ತಿಳಿಸುವಂಥವು ಇನ್ನೆಲ್ಲೂ ಇಲ್ಲ ಎಂದು ಮುಖ್ಯಮಂತ್ರಿಗಳು ಅಭಿಪ್ರಾಯಪಟ್ಟರು.

ರಮಣಶ್ರೀ ಅವರ ಆದರ್ಶದಲ್ಲಿ ಬದುಕುತ್ತಿರುವ ಹಿರಿಯರಾದ ಎಸ್. ಷಡಕ್ಷರಿ ಅವರ ಹುಟ್ಟುಹಬ್ಬವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದ್ದು, ಮನಕ್ಕೆ ಔತಣವನ್ನು ಉಣಬಡಿಸುತ್ತಿದ್ದಾರೆ. ಷಡಕ್ಷರಿಯವರು ಸಕಾರಾತ್ಮಕ ಶಕ್ತಿಯ ಕೇಂದ್ರ. ಉದ್ಯಮ, ಸಾಹಿತ್ಯ, ಪರೋಪಕಾರ, ಸಂಘ-ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಮನುಷ್ಯನ ತನ್ನ ಬದುಕನ್ನು ಎಷ್ಟು ಆಯಾಮಗಳಲ್ಲಿ ಬದುಕಬಹುದೆನ್ನುವುದನ್ನು ಷಡಕ್ಷರಿಯವರನ್ನು ನೋಡಿ ಕಲಿಯಬೇಕಿದೆ. ಕನ್ನಡ ನಾಡಿನ ಚಿಂತನಾಶೀಲ ವ್ಯಕ್ತಿಯಲ್ಲ ಶಕ್ತಿ ಎಂದರು.

**ಗುರುರಾಜ ಕರ್ಜಗಿ ಸೌಜನ್ಯ ಶೀಲ ಚಿಂತಕರು:** ಗುರುರಾಜ ಕರ್ಜಗಿ ಅವರು ಶರಣ ಸಾಹಿತ್ಯದ ತಿರುಳನ್ನು ತಿಳಿಸಿದ್ದಾರೆ. ಅಧುನಿಕ (2ನೇ ಪುಟಕ್ಕೆ)

# ದೆಹಲಿ ಮಾಲಿನ್ಯ: ಕಟ್ಟಡ ನಿರ್ಮಾಣ ನಿಷೇಧಕ್ಕಾಗಿ ಪರಿಹಾರ ಕೋರಿ ಅರ್ಜಿ

ನವದೆಹಲಿ, ನ. 17 – ವಾಯುಮಾಲಿನ್ಯ ನಿಯಂತ್ರಣಕ್ಕಾಗಿ ರಾಜಧಾನಿ ವಲಯದಲ್ಲಿ ಬರುವ ರಾಜ್ಯಗಳು ಕಟ್ಟಡ ನಿರ್ಮಾಣದ ಮೇಲೆ ಹಠಾತ್ತನೇ ನಿಷೇಧ ಹೇರಿರುವುದರಿಂದ ತಮಗೆ ಆಗಿರುವ ನಷ್ಟಕ್ಕೆ ಪರಿಹಾರ ನೀಡುವಂತೆ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘ ಟನೆಯೊಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದೆ.

ಕಟ್ಟಡ ನಿರ್ಮಾಣ ಚಟುವಟಿಕೆಗಳ ಮೇಲೆ ಸಂಪೂರ್ಣ ನಿಷೇಧ ಹೇರಲಾಗಿದೆ. ಮಾಲಿನ್ಯಕ್ಕೆ ಕಾರಣವಾಗುವ ಹಾಗೂ ಕಾರಣವಾಗದೇ ಇರುವ ಕಟ್ಟಡ ನಿರ್ಮಾಣ ಚಟುವಟಿಕೆಗಳನ್ನು ಪ್ರತ್ಯೇಕಿಸಿಲ್ಲ. ಇದು ಅತಾರ್ಕಿಕ ನಿರ್ಧಾರ ಎಂದು ಎನ್.ಸಿ.ಸಿ.ಸಿ. ಎಲ್.ಸಿ.ಎಲ್. ಸಂಘಟನೆ ಹೇಳಿದೆ.

ದೆಹಲಿ ಸರ್ಕಾರದ ಬಳಿ ಕಟ್ಟಡ ಕಾರ್ಮಿಕರ ನಿಧಿಯ 2,700 ಕೋಟಿ ರೂ. ಹಣ ಇದೆ. ಇಷ್ಟಾದರೂ, ಕಟ್ಟಡ ನಿರ್ಮಾಣಕ್ಕೆ ತಡೆ ಹಾಕಲಾದ ಅವಧಿಗೆ ಪರಿಹಾರ ಕೊಡುತ್ತಿಲ್ಲ ಎಂದು ಸಂಘಟನೆ ಅರ್ಜಿಯಲ್ಲಿ ಹೇಳಿದೆ.

ದೆಹಲಿ ಸರ್ಕಾರ ಹಾಗೂ ಹರಿಯಾಣ ಸರ್ಕಾರಗಳು ಮಾಲಿನ್ಯಕ್ಕೆ ಕಾರಣವಾಗುವ ಚಟುವಟಿಕೆಗಳನ್ನು ಗುರುತಿಸಲು ವಿಫಲವಾಗಿವೆ. ಸಾಮಾನ್ಯವಾಗಿ ಕಟ್ಟಡ ಧ್ವಂಸ ಹಾಗೂ ನೆಲ ಅಗಿಯುವ ಕೆಲಸಗಳಿಗೆ ಸೀಮಿತವಾಗಿ ನಿಷೇಧ ಹೇರಿದ್ದರೆ ಸಾಕಾಗಿರುತ್ತಿತ್ತು ಎಂದು ಸಂಘಟನೆ ವಾದ ಮಂಡಿಸಿದೆ. ಸಂಪೂರ್ಣ ನಿಷೇಧ ಅನಗತ್ಯ ಹಾಗೂ ಲಕ್ಷಾಂತರ ಕಟ್ಟಡ ಕಾರ್ಮಿಕರ ಜೀವನದ ಹಕ್ಕುಗಳನ್ನು ಕಸಿದಂತೆ ಎಂದು ಸಂಘಟನೆ ಹೇಳಿದೆ.

# ರೈಲ್ವೇ ಕೆಳ ಸೇತುವೆಯಲ್ಲಿ ಮತ್ತೆ ನೀರು ಸಂಗ್ರಹ



**ಮೇಯರ್ ಪರಿಶೀಲನೆ**

ದಾವಣಗೆರೆ, ನ.17- ಪುನಃ ನೀರು ನಿಲ್ಲುವಿಕೆಯ ದೂರಿನ ಹಿನ್ನೆಲೆಯಲ್ಲಿ ನಗರ ಪಾಲಿಕೆ ಎದುರಿನ ರೈಲ್ವೇ ಕೆಳ ಸೇತುವೆ ಸ್ಥಳಕ್ಕೆ ಮಹಾನಗರ ಪಾಲಿಕೆಯ ಮಹಾಪೌರರಾದ ಎಸ್.ಟಿ. ವೀರೇಶ್ ಅವರು ಇಂದು ರಾತ್ರಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಿನ್ನೆ ಮತ್ತು ಇಂದು ಸುರಿದ ಮಳೆಯಿಂದಾಗಿ ಇತ್ತೀಚಿಗಷ್ಟೇ ಸಮಸ್ಯೆಗೆ ಪರಿಹಾರ ಸಿಕ್ಕಿದ್ದ ಈ ಕೆಳ ಸೇತುವೆಯಲ್ಲಿ ಮತ್ತೆ ನೀರು ನಿಲ್ಲುವಂತಾಗಿ, ಸಂಚಾರಕ್ಕೆ ಅಡಚಣೆ ಉಂಟಾಗಿ ಪುನಃ ಸಮಸ್ಯೆ ಎದುರಾಗಿದೆ ಎಂಬುದಾಗಿ ಸಾರ್ವಜನಿಕರು ಸಾಮಾಜಿಕ ಜಾಲತಾಣದ ಮುಖೇನ ದೂರು ವಿಡಿಯೋಗಳನ್ನು ಹರಿಬಿಟ್ಟಿದ್ದರು.

ದೂರಿನ ಮಾಹಿತಿ ತಿಳಿಯುತ್ತಿದ್ದಂತೆ ಕೂಡಲೇ ಕೆಳ ಸೇತುವೆಗೆ ಭೇಟಿ ನೀಡಿದ ಮೇಯರ್ ವೀರೇಶ್, ನೀರು ನಿಂತಿದೆಯೋ, ಇಲ್ಲವೋ ಎಂಬ ಬಗ್ಗೆ ಪರಿಶೀಲಿಸಿದರು. ಈ ವೇಳೆ ನೀರು ಸರಾಗವಾಗಿ (2ನೇ ಪುಟಕ್ಕೆ)

# ಅಯ್ಯಪ್ಪ ದೇವಾಲಯದ ಪ್ರಸಾದಕ್ಕೆ ಹಲಾಲ್ ಬೆಲ್ಲ : ಅರ್ಜಿ ದಾಖಲು



ಕೊಚ್ಚಿ, ನ. 17 – ಶಬರಿಮಲೈ ಸ್ವಾಮಿ ಅಯ್ಯಪ್ಪ ದೇವಾಲಯದಲ್ಲಿ ಪ್ರಸಾದ ತಯಾರಿಸಲು 'ಹಲಾಲ್ ಬೆಲ್ಲ' ಬಳಸಲಾಗುತ್ತಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ, ಕೇರಳ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ. ಈ ಬೆಲ್ಲ ಪೂರೈಸುವಂತೆ ಅರ್ಜಿ ದಾಖಲಾಗಿರುವ ಹಿನ್ನೆಲೆಯಲ್ಲಿ, ಶಬರಿಮಲೆಯ ವಿಶೇಷ ಆಯುಕ್ತರಿಂದ ನ್ಯಾಯಾಲಯ ವರದಿ ಕೇಳಿದೆ.

# ಸರ್ಕಾರಿ ಶಾಲೆ ದಾಖಲಾತಿ ಹೆಚ್ಚಳ

**ಉತ್ತರ ಪ್ರದೇಶ ಹಾಗೂ ಕೇರಳಗಳಲ್ಲಿ ಖಾಸಗಿ ಶಾಲೆ ಬಿಟ್ಟವರ ಪ್ರಮಾಣ ಹೆಚ್ಚು**

ನವದೆಹಲಿ, ನ. 17 – ಕಳೆದ ಮೂರು ವರ್ಷಗಳಲ್ಲಿ ಖಾಸಗಿ ಶಾಲೆಗಳಿಂದ ಸರ್ಕಾರಿ ಶಾಲೆಗಳಿಗೆ ಬರುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಉತ್ತರ ಪ್ರದೇಶ ಹಾಗೂ ಕೇರಳಗಳಲ್ಲಿ ಈ ಪ್ರವೃತ್ತಿ ಗರಿಷ್ಠವಾಗಿದೆ ಎಂದು ಶಿಕ್ಷಣ ಕುರಿತ ವಾರ್ಷಿಕ ವರದಿಯಾದ ಎ.ಎಸ್.ಇ.ಆರ್. ತಿಳಿಸಿದೆ.

25 ರಾಜ್ಯಗಳು ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳ 76 ಸಾವಿರಕ್ಕೂ ಹೆಚ್ಚು ಮನೆಗಳು ಹಾಗೂ 75 ಸಾವಿರಕ್ಕೂ ಹೆಚ್ಚು ಮಕ್ಕಳನ್ನು ಭೇಟಿ ಮಾಡಿದ ನಂತರ ವರದಿ ರೂಪಿಸಲಾಗಿದೆ. ಖಾಸಗಿಯಿಂದ ಸರ್ಕಾರಿ ಶಾಲೆಗೆ ಬರುವ ಬೆಳವಣಿಗೆ (2ನೇ ಪುಟಕ್ಕೆ)

# ರಾಜನಹಳ್ಳಿ ಲೀಲಾವತಿ ದಯಾನಂದ್ ನಿಧನ



ದಾವಣಗೆರೆ ಪಿ.ಜೆ. ಬಡಾವಣೆ 2ನೇ ಮೇನ್ ವಾಸಿ

**ಶ್ರೀಮತಿ ರಾಜನಹಳ್ಳಿ ಲೀಲಾವತಿ ದಯಾನಂದ್** ಅವರು ದಿನಾಂಕ 17–11–2021ರ ಬುಧವಾರ ಮಧ್ಯಾಹ್ನ 12.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 85 ವರ್ಷ ವಯಸ್ಸಾಗಿತ್ತು. ಮಕ್ಕಳು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 19–11–2021ರ ಶುಕ್ರವಾರ ಬೆಳಿಗ್ಗೆ 10.30 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು, **ರಾಜನಹಳ್ಳಿ ಬದ್ರಿನಾಥ್ ಮತ್ತು ಕುಟುಂಬದವರು**




ವಿಶ್ವಬಂಧು ಮರುಳಸಿದ್ಧ
'ತರಳ! ಬಾಳು!'



ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ
ಶ್ರೀ ತರಳಬಾಳು ಜಗದ್ಗುರು
ಲಿಂಗೈಕ್ಯ ಶ್ರೀ ಗುರುಶಾಂತರಾಜ ದೇಶೀಕೇಂದ್ರ ಮಹಾಸ್ವಾಮಿಗಳವರು





ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ
ಶ್ರೀ ತರಳಬಾಳು ಜಗದ್ಗುರು
ಲಿಂಗೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು

## ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘ (ರಿ)

ಸಿರಿಗೆರೆ/ದಾವಣಗೆರೆ.

## ಮೀಟಿಂಗ್ ನೋಟೀಸ್

ದಿನಾಂಕ : 07.11.2021 ರಂದು ಭಾನುವಾರ ಪತ್ರಿಕೆ ಹಾಗೂ ಮಾಧ್ಯಮಗಳಲ್ಲಿ ಕೆಲವರು ನಮ್ಮ ಮಠ ಮತ್ತು ಸಮಾಜದ ಗೌರವ, ಘನತೆಗೆ ಧಕ್ಕೆ ಬರುವಂತಹ ಸುಳ್ಳು ಆರೋಪ ಮತ್ತು ನಿಂದನೆಯ ಮಾತುಗಳನ್ನು ಆಡಿರುವ ಹಿನ್ನೆಲೆಯಲ್ಲಿ, ದಿನಾಂಕ : 19.11.2021 ರಂದು ಶುಕ್ರವಾರ ಬೆಳಗ್ಗೆ 11.00 ಗಂಟೆಗೆ ಸಿರಿಗೆರೆಯ ಶ್ರೀ ಗುರುಶಾಂತೇಶ್ವರ ದಾಸೋಹ ಮಂಟಪದಲ್ಲಿ ಶ್ರೀ ತರಳಬಾಳು ಜಗದ್ಗುರು ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಸಮಾಜದ ಸಭೆಯನ್ನು ಕರೆಯಲಾಗಿದೆ.

ಎಲ್ಲಾ ತಾಲ್ಲೂಕುಗಳ ಅಧ್ಯಕ್ಷರು, ಪದಾಧಿಕಾರಿಗಳು, ಸಮಾಜದ ಹಿರಿಯರು ಮತ್ತು ಯುವಕರು ತಪ್ಪದೇ ಈ ಸಭೆಗೆ ಆಗಮಿಸಬೇಕಾಗಿ ಕೋರಿದೆ.

ಕೆ.ಆರ್. ಜಯದೇವಪ್ಪ
ಅಧ್ಯಕ್ಷರು, ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘ (ರಿ) ಸಿರಿಗೆರೆ/ದಾವಣಗೆರೆ.



## ಕನಗೊಂಡನಹಳ್ಳಿಯಲ್ಲಿ ರುದ್ರ ಹೋಮ

**ಕನಗೊಂಡನಹಳ್ಳಿ ಗ್ರಾಮದಲ್ಲಿ ಶ್ರೀ ಮಹೇಶ್ವರ ಸ್ವಾಮಿ, ಶ್ರೀ ನಂದೀಶ್ವರ ಸ್ವಾಮಿ ಶಿಲಾಮೂರ್ತಿ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ನಡೆದ ರುದ್ರ ಹೋಮದಲ್ಲಿ ಗ್ರಾಮಸ್ಥರು ಭಾಗಿಯಾಗಿದ್ದರು.**

# ಬಸ್ಸಿನ ಸೌಕರ್ಯಕ್ಕೆ ಒತ್ತಾಯಿಸಿ ವಿದ್ಯಾರ್ಥಿಗಳ ಪ್ರತಿಭಟನೆ



ಹರಪನಹಳ್ಳಿ ತಾಲ್ಲೂಕಿನಲ್ಲಿ ಎಐಎಸ್‌ಎಫ್ ಆಕ್ರೋಶ

ಹರಪನಹಳ್ಳಿ,ನ.17- ತಾಲೂಕಿನ ಮೈದೂರು, ಚಿಗಟೇರಿ, ಬೇವಿನಹಳ್ಳಿ ಗ್ರಾಮಗಳಿಗೆ ಸಮಯಕ್ಕೆ ಸರಿಯಾಗಿ ಬಸ್ಸಿನ ಸೌಕರ್ಯ ಕಲ್ಪಿಸಿಕೊಡುವಂತೆ ಒತ್ತಾಯಿಸಿ, ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ನೇತೃತ್ವದಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿ ಕೆಎಸ್‌ಆರ್‌ಟಿಸಿ ಡಿಪೋ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಿದರು.

ವಿದ್ಯಾರ್ಥಿ ಮುಖಂಡ ಹೆಚ್. ರಮೇಶ ನಾಯ್ಕ ಮಾತನಾಡಿ, ಮೈದೂರು, ಚಿಗಟೇರಿ, ಬೇವಿನಹಳ್ಳಿ ಗ್ರಾಮಗಳಿಂದ ವಿದ್ಯಾರ್ಥಿಗಳು ಹರಪನಹಳ್ಳಿ ಪಟ್ಟಣಕ್ಕೆ ಪ್ರತಿನಿತ್ಯ ವಿದ್ಯಾಭ್ಯಾಸಕ್ಕಾಗಿ ವಿವಿಧ ಶಾಲಾ-ಕಾಲೇಜುಗಳಿಗೆ ಬರುತ್ತಾರೆ. ಇದರಿಂದಾಗಿ ಗ್ರಾಮಗಳಿಗೆ ಸಮಯಕ್ಕೆ ಸರಿಯಾಗಿ ಸಾರಿಗೆ ಸೌಕರ್ಯವಿಲ್ಲದೇ ತೊಂದರೆ ಅನುಭವಿಸುತ್ತಿದ್ದು, ತಕ್ಷಣ ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಬಸ್ ತೊಂದರೆಯನ್ನು ಸರಿಪಡಿಸಿ ಕೂಡಲೇ ಸಾರಿಗೆ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ಒತ್ತಾಯಿಸಿದರು.

ಮುಖಂಡ ದೊಡ್ಡ ಬಸವರಾಜ್ ಮಾತನಾಡಿ, ಬಸ್ ಸೌಲಭ್ಯಕ್ಕಾಗಿ ಅನೇಕ ಬಾರಿ ತಾಲೂಕು ಆಡಳಿತ ಅಧಿಕಾರಿಗಳಲ್ಲಿ ಮನವಿ ಮಾಡಿಕೊಂಡರೂ ಇದುವರೆಗೆ ಯಾವುದೇ ರೀತಿಯ ಪ್ರತಿಕ್ರಿಯೆ ಅಧಿಕಾರಿಗಳಿಂದ ಬಂದಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯತನವೇ ಇದಕ್ಕೆ ಕಾರಣ. ಇದನ್ನು ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ಖಂಡಿಸುತ್ತದೆ. ಹೀಗಾಗಿ ವಿದ್ಯಾರ್ಥಿಗಳು ಮಾತ್ರವಲ್ಲದೇ ಸಾರ್ವಜನಿಕರಿಗೂ ಸಹ ಅನುಕೂಲವಾಗುವಂತೆ ಸೂಕ್ತ ಸಮಯಕ್ಕೆ ಸಾರಿಗೆ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ಮನವಿಯಲ್ಲಿ ತಿಳಿಸಿದರು. ಈ ಸಂದರ್ಭದಲ್ಲಿ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಸಹಾ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ವಚನ ಪಾಲಿಸಿದರೆ ಬದುಕು ಸಾರ್ಥಕ

**(1ನೇ ಪುಟದಿಂದ)** ಕರ್ನಾಟಕದಲ್ಲಿ ಅತ್ಯಂತ ಸೌಜನ್ಯಶೀಲ ಚಿಂತಕರು, ಶಿಕ್ಷಣ ಕ್ಷೇತ್ರದಲ್ಲಿ ನೈತಿಕತೆಯನ್ನು ತುಂಬುವ ಕೆಲಸವನ್ನು ಗುರುರಾಜ ಕರ್ಜಗಿಯವರು ಮಾಡುತ್ತಿದ್ದಾರೆ. ಅವರ ಬಗ್ಗೆ ಹಾಗೂ ಅವರ ವಿಚಾರಗಳ ಬಗ್ಗೆ ತಮಗೆ ಅಪಾರ ಗೌರವವಿದೆ ಎಂದು ಹೇಳಿದರು.

**ಗೊ.ರು.ಅವರ ಬದ್ಧತೆ ಉತ್ಕೃಷ್ಟವಾದದ್ದು:** ಗೊ.ರು ಚನ್ನಬಸಪ್ಪನವರಿಗೆ ವಚನ ಸಾಹಿತ್ಯದಲ್ಲಿ ಇರುವ ಬದ್ಧತೆ, ಅವರ ವಚನ ಸಾಹಿತ್ಯದ ವಿಶ್ಲೇಷಣೆ ಬಹಳ ಉತ್ಕೃಷ್ಟವಾಗಿವೆ. ಜಾನಪದದ ಬಗ್ಗೆ ಅವರಿಗೆ ಅಪಾರವಾದ ಕಳಕಳಿಯಿದೆ. ವಿಶ್ವದ ಏಕಮೇವ ಜಾನಪದ ವಿಶ್ವವಿದ್ಯಾಲಯ ಗೊ.ರು.ಚನ್ನಬಸಪ್ಪ ಅವರ ಕಾರಣದಿಂದ ಶಿಗ್ಗಾವಿಯಲ್ಲಿದೆ. ಜಾನಪದದಲ್ಲಿ ವೈವಿಧ್ಯತೆ ಅಗಾಧವಾಗಿದೆ. ಜೀವನದ ಎಲ್ಲ ಮುಖಗಳನ್ನು ತೋರುವ ಕೆಲಸವನ್ನು ಗೊ.ರು.ಚನ್ನಬಸಪ್ಪ ಮಾಡಿದ್ದಾರೆ ಎಂದು ಸ್ಮರಿಸಿದರು.

ಇದೇ ಸಂದರ್ಭದಲ್ಲಿ ಎಸ್.ಷಡಕ್ಷರಿ ಅವರು ಬರೆದಿರುವ 'ಕ್ಷಣ ಹೊತ್ತು ಅಣಿ ಮುತ್ತು' ಭಾಗ 9 ಪುಸ್ತಕವನ್ನು ಲೋಕಾರ್ಪಣೆ ಮಾಡಲಾಯಿತು. ಸಮಾರಂಭದಲ್ಲಿ ಡಾ. ಗುರುರಾಜ ಕರ್ಜಗಿ ಅವರಿಗೆ ರಮಣಶ್ರೀ ಶರಣ ಜೀವಮಾನ ಸಾಧಕ ಪ್ರಶಸ್ತಿಯನ್ನು ಸಿಎಂ ಬೊಮ್ಮಾಯಿ ಪ್ರದಾನ ಮಾಡಿದರು. ಡಾ. ಶಾಂತಾ ಇಮ್ರಾಪೂರ, ಡಾ. ಪ್ರದೀಪ ಕುಮಾರ ಹೆಬ್ರಿ, ಡಾ. ನಂದಾ ಪಾಟೀಲ್, ಸ್ವಾಮಿ ವಿವೇಕಾನಂದ ಇಂಟಿಗ್ರೇಟೆಡ್ ಗ್ರಾಮೀಣ ಆರೋಗ್ಯ ಕೇಂದ್ರ, ಡಾ. ಭಾಗ್ಯಮ್ಮ ಜಿ. ಸ್ಮಿತಾರಾವ್ ಬೆಳ್ಳೂರ, ಪತಂಜಲಿ ಯೋಗ ಶಿಕ್ಷಣ ಸಮಿತಿಗೆ ರಮಣಶ್ರೀ ಶರಣ ಉತ್ತೇಜನ ಶ್ರೇಣಿ ಪ್ರಶಸ್ತಿ ಪ್ರದಾನ ಮಾಡಿದರು. ಸಮಾರಂಭದಲ್ಲಿ ಹಿರಿಯ ಸಾಹಿತಿ ಗೊ. ರು. ಚನ್ನಬಸಪ್ಪ, ಎಸ್.ಷಡಕ್ಷರಿ, ಹಿರಿಯ ಪತ್ರಕರ್ತ ರವಿ ಹೆಗಡೆ, ಸಾಹಿತಿ ಮನು ಬಳಿಗಾರ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

# ನೆಲ ಕಚ್ಚಿದ ಸಾವಿರ ಎಕರೆ ಭತ್ತದ ಬೆಳೆ

**(1ನೇ ಪುಟದಿಂದ)** ಕಂದಾಯ ನಿರೀಕ್ಷಕ ಆನಂದ್ 'ಜನತಾವಾಣಿ' ಗೆ ಮಾಹಿತಿ ನೀಡಿದ್ದಾರೆ.

ನೆಲಕಚ್ಚಿರುವ ಭತ್ತದ ಬೆಳೆಯ ಅಂದಾಜು ನಷ್ಟ 30 ಲಕ್ಷ ರೂ. ಎನ್ನಲಾಗಿದೆ. ಭಾನುವಳ್ಳಿ, ಕೆ. ಬೇವಿನಹಳ್ಳಿ, ಬನ್ನಿಕೋಡು, ಕೊಕ್ಕನೂರು, ನಂದಿಗುಡಿ ಇನ್ನಿತರೆ ಗ್ರಾಮಗಳಲ್ಲೂ ಭತ್ತದ ಬೆಳೆ ನೆಲಕಚ್ಚಿರುವ ಬಗ್ಗೆ ವರದಿಯಾಗಿದೆ. ಹರಿಹರ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರು ಹಾಲಿವಾಣ, ಹರಳಹಳ್ಳಿ, ನಿಟ್ಟೂರಿನಲ್ಲಿ ಭತ್ತ ಚಾಪೆ ಹಾಸಿರುವುದನ್ನು ಪರಿಶೀಲಿಸಿ, ನೆಹರು ನಗರ ಕ್ಯಾಂಪ್‌ನಲ್ಲಿ ವಾಸದ ಮನೆ ಕುಸಿದು ಬಿದ್ದಿರುವುದನ್ನು ವೀಕ್ಷಿಸಿದರು.

ಬೆಳೆ ಹಾನಿ ಬಗ್ಗೆ ಕೃಷಿ ಇಲಾಖೆಯ ಇನಾಯತ್ ಸ್ಥಳ ಪರಿಶೀಲಿಸಿದರು. ಹರಳಹಳ್ಳಿ ವೃತ್ತದಲ್ಲಿ ಗ್ರಾಮ ಲೆಕ್ಕಾಧಿಕಾರಿ ಅಣ್ಣಪ್ಪ, ಕುಂಬಳೂರು ವೃತ್ತದಲ್ಲಿ ಶ್ರೀಧರ್, ಜಿಗಳಿ ವೃತ್ತದಲ್ಲಿ ಸುಭಾನಿ ಅವರು ಬೆಳೆ ಹಾನಿ ಕುರಿತು ವರದಿ ನೀಡಿದ್ದಾರೆ ಎಂದು ಕಂದಾಯ ನಿರೀಕ್ಷಕ ಆನಂದ್ ತಿಳಿಸಿದರು.

## ಮನೆಗಳಿಗೆ ನುಗ್ಗಿದ ನೀರು

**(1ನೇ ಪುಟದಿಂದ)** ಸ್ಥಳೀಯ ಜನರು ಪರದಾಡಿದರು. ಕಾಳಿದಾಸ ನಗರ, ಬೆಂಕಿನಗರ, ಇಂದ್ರಾನಗರ, ಹಳೆ ಹರ್ಲಾಪುರ ಸೇರಿದಂತೆ ನಗರದ ಹಲವಾರು ಬಡಾವಣೆಗಳಲ್ಲಿ ಮನೆಗಳಿಗೆ ನೀರು ನುಗ್ಗಿದೆ.

ತಾಲ್ಲೂಕಿನ ಹಲವು ಗ್ರಾಮಗಳಲ್ಲಿಯೂ ಮಳೆ ಹೆಚ್ಚಿನ ಪ್ರಮಾಣದಲ್ಲಿ ಬಂದಿರುವುದರಿಂದ ಕಟಾವು ಮಾಡಿದ್ದ ಭತ್ತವು ನೀರಿನಲ್ಲಿ ಕೊಚ್ಚಿಕೊಂಡು ಹೋಗಿದೆ. ಈಗಾಗಲೇ ಕಟಾವು ಹಂತದಲ್ಲಿ ಇದ್ದ ಭತ್ತದ ಬೆಳೆಗೂ ಹಾನಿಯಾಗಿದೆ. ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಕೃಷಿ ಇಲಾಖೆ ಅಧಿಕಾರಿ ನಾರದಪ್ಪ ಮತ್ತು ತೋಟಗಾರಿಕೆ ಇಲಾಖೆಯ ರೇಖಾ ನೇತೃತ್ವದಲ್ಲಿ ಬೆಳೆ ಹಾನಿ ಸಮೀಕ್ಷೆ ಮಾಡಲಾಗುತ್ತಿದೆ.

# ಪೋಷಕರ ಮನವೊಲಿಸಿ ಮಕ್ಕಳನ್ನು ಶಾಲೆಗೆ ತರುವುದು ಶಿಕ್ಷಕರ ಜವಾಬ್ದಾರಿ




ಬಿ.ಸಿ. ಸಿದ್ದಪ್ಪ

ಹರಿಹರ, ನ.17-ಅತಿ ಹೆಚ್ಚು ಬಡವರ ಮಕ್ಕಳು ಓದುತ್ತಿರುವ ಜಿಬಿಎಂಎಸ್ ಹಾಗೂ ಡಿಆರ್‌ಎಂ ಶಾಲೆಗಳನ್ನು ಯೂತ್ ಫಾರ್ ಸೇವಾ ಸಂಸ್ಥೆಯವರು ದತ್ತು ಪಡೆಯುವ ಮೂಲಕ ಮಕ್ಕಳ ಹಾಗೂ ಶಾಲೆಗಳ ಸರ್ವಾಂಗೀಣ ಅಭಿವೃದ್ಧಿಗೆ ಸಹಕರಿಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಸಿ. ಸಿದ್ದಪ್ಪ ಹೇಳಿದರು.

ನಗರದ ಜಿಬಿಎಂಎಸ್ ಶಾಲೆಯಲ್ಲಿ ಬೆಂಗಳೂರಿನ ಎಆರ್‌ಎಂ ಕಂಪನಿ ಹಾಗೂ ಯೂತ್ ಫಾರ್ ಸೇವಾ ಸಂಸ್ಥೆ ವತಿಯಿಂದ ಶಾಲಾ ಮಕ್ಕಳಿಗೆ ಉಚಿತ ಬ್ಯಾಗ್ ಹಾಗೂ ಕಲಿಕಾ ಸಾಮಗ್ರಿಗಳನ್ನು ವಿತರಣಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ಕಾರಗಳು ಮಕ್ಕಳ ಸಮಗ್ರ ಶಿಕ್ಷಣಕ್ಕಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಮಕ್ಕಳಿಗೆ ಉಚಿತವಾಗಿ ಹಾಲು, ಬಿಸಿ ಊಟ ಮತ್ತು 2 ಜೊತೆ ಸಮವಸ್ತ್ರಗಳನ್ನು ನೀಡಲಾಗುತ್ತಿದೆ. ಆದರೂ ಹಲವು ಮಕ್ಕಳು ಶಾಲೆಗೆ ಬರುತ್ತಿಲ್ಲ. ತಾಲ್ಲೂಕಿನ ಆಯಾ ಶಾಲೆಯ ಶಿಕ್ಷಕರು ಶಾಲೆ ಬಿಟ್ಟಿರುವ ಮಕ್ಕಳ ಪೋಷಕರು ಮನವೊಲಿಸಿ, ಮಕ್ಕಳನ್ನು ಶಾಲೆಗೆ ಮರಳಿ ಕರೆ ತರುವ ಕಾರ್ಯ ಮಾಡಬೇಕು ಎಂದು ಹೇಳಿದರು.

ಪತ್ರಕರ್ತ ಶೇಖರಗೌಡ ಪಾಟೀಲ್ ಮಾತನಾಡಿ, ಭವಿಷ್ಯದಲ್ಲಿ ಉನ್ನತ ಸಾಧನೆಗಳ ಕನಸು ಕಾಣುವುದರ ಜೊತೆಗೆ ಆ ಕನಸುಗಳನ್ನು ಬದುಕಿನಲ್ಲಿ ಸಾಕಾರಗೊಳಿಸಲು ಶ್ರಮವಹಿಸಿ ಓದಬೇಕು. ಅಂದಾಗ ಮಾತ್ರ ಗುರಿ ಮುಟ್ಟಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಾಮಕೃಷ್ಣ ಮಾತನಾಡಿ, ಮಕ್ಕಳು ಉತ್ತಮ ಶಿಕ್ಷಣ ಪಡೆದು ಉನ್ನತ ಮಟ್ಟದ ಸಾಧನೆ ಮಾಡಬೇಕು ಎಂದು ಆಶಿಸಿದರು.

ಶಿಕ್ಷಕ ಶರಣ ಕುಮಾರ್ ಹೆಗ್ಡೆ ಮಾತನಾಡಿದರು. ವೇದಿಕೆಯಲ್ಲಿ ದೈಹಿಕ ಶಿಕ್ಷಣಾಧಿಕಾರಿ ಮಂಜುಳಾ, ಉರ್ದು ಶಿಕ್ಷಕರ ಸಂಘದ ಅಧ್ಯಕ್ಷ ಅಶ್ಫಾಕ್ ಅಹ್ಮದ್, ಗಾಂಧಿ ಮೈದಾನ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಶ್ರೀನಿವಾಸ್, ಸಿಆರ್‌ಪಿ ರೂಪ, ಪ್ರವೀಣ್ ಕುಮಾರ್, ಪುಷ್ಪಾವತಿ ಇನ್ನಿತರರಿದ್ದರು.

## ಸರ್ಕಾರಿ ಶಾಲೆ ದಾಖಲಾತಿ ಹೆಚ್ಚಳ

**(1ನೇ ಪುಟದಿಂದ)** ದೇಶಾದ್ಯಂತ ನಡೆಯುತ್ತಿದೆ. 2018ರಲ್ಲಿ ಖಾಸಗಿ ಶಾಲೆಗಳಲ್ಲಿರುವ ಆರರಿಂದ 14 ವರ್ಷ ವಯೋಮಾನದ ವಿದ್ಯಾರ್ಥಿಗಳ ಸಂಖ್ಯೆ ಶೇ.32.5ರಷ್ಟಿತ್ತು. ಅದು 2021ರಲ್ಲಿ ಶೇ.24.4ಕ್ಕೆ ಕುಸಿದಿದೆ ಎಂದು ಎ.ಎಸ್.ಇ.ಆರ್. ವಾರ್ಷಿಕ ವರದಿಯಲ್ಲಿ ತಿಳಿಸಲಾಗಿದೆ.

ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರಿಬ್ಬರೂ ಸರ್ಕಾರಿ ಶಾಲೆಗಳಿಗೆ ಬರುವುದು ಹೆಚ್ಚಾಗಿದೆ. ಆದರೂ, ಖಾಸಗಿ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗಿಂತ ವಿದ್ಯಾರ್ಥಿಗಳೇ ಹೆಚ್ಚಾಗಿದ್ದಾರೆ ಎಂದು ವರದಿ ತಿಳಿಸಿದೆ.

ಸರ್ಕಾರಿ ಶಾಲೆಗಳಿಗೆ ಬರುವ ಮಕ್ಕಳ ಪ್ರಮಾಣ 2018ರಲ್ಲಿ ಶೇ.64.3ರಷ್ಟಿತ್ತು. ಅದು 2021ರಲ್ಲಿ ಶೇ.70.3ಕ್ಕೆ ಹೆಚ್ಚಾಗಿದೆ. 2006ರಿಂದ 2014ರ ನಡುವೆ ಖಾಸಗಿ ಶಾಲೆಗಳಿಗೆ ತೆರಳುವ ವಿದ್ಯಾರ್ಥಿಗಳ ಸಂಖ್ಯೆ ಸ್ಥಿರವಾಗಿ ಹೆಚ್ಚಾಗುತ್ತಿತ್ತು. ಆನಂತರ ಕೆಲ ವರ್ಷ ಶೇ.30ರ ಹಂತದಲ್ಲಿ ಸ್ಥಿರವಾಗಿ ನಿಂತಿತ್ತು. ಕೊರೊನಾ ಸಮಯದಲ್ಲಿ ಗಣನೀಯವಾಗಿ ಕಡಿಮೆಯಾಗಿದೆ. ಕೊರೊನಾಗೆ ಮುಂಚೆಯೂ ಸಹ ಸರ್ಕಾರಿ ಶಾಲೆಗಳಿಗೆ ಬರುವ ವಿದ್ಯಾರ್ಥಿನಿಯರ ಸಂಖ್ಯೆ ಹೆಚ್ಚಾಗಿತ್ತು ಎಂದು ವರದಿಯಲ್ಲಿ ಹೇಳಲಾಗಿದೆ.

ಈ ಪ್ರವೃತ್ತಿ ತಾತ್ಕಾಲಿಕವೇ ಅಥವಾ ಇದೇ ಹಾದಿಯಲ್ಲಿ ಮುಂದುವರೆಯಲಿದೆಯೇ ಎಂಬುದು ಮುಂಬರುವ ದಿನಗಳಲ್ಲಿ ಗೊತ್ತಾಗಬೇಕಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಉತ್ತರಪ್ರದೇಶದಲ್ಲಿ ಸರ್ಕಾರಿ ಶಾಲೆಗಳಿಗೆ ಬರುವ ವಿದ್ಯಾರ್ಥಿಗಳ ಪ್ರಮಾಣ ಶೇ.13.2ರಷ್ಟು ಹೆಚ್ಚಾಗಿದೆ. ಕೇರಳದಲ್ಲಿ ಶೇ.11.9ರಷ್ಟು ಏರಿಕೆಯಾಗಿದೆ. ರಾಜಸ್ಥಾನದಲ್ಲಿ ಶೇ.9.4, ಮಹಾರಾಷ್ಟ್ರದಲ್ಲಿ ಶೇ.9.2, ಕರ್ನಾಟಕದಲ್ಲಿ ಶೇ.8.3, ತಮಿಳುನಾಡಿನಲ್ಲಿ ಶೇ.9.6 ಹಾಗೂ ಆಂಧ್ರಪ್ರದೇಶದಲ್ಲಿ ಶೇ.8.4ರಷ್ಟು ಏರಿಕೆ ಕಂಡು ಬಂದಿದೆ.

# ಲೌಕಿಕ ಬದುಕಿನ ಬೆಳಕಿಗೆ ದೇವಾಲಯಗಳ ಪಾತ್ರ ಮುಖ್ಯ





**ಹೊಸ ಕುಂದುವಾಡದಲ್ಲಿ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ನವಗ್ರಹಗಳ ಪ್ರತಿಷ್ಠಾಪನೆ**

ದಾವಣಗೆರೆ, ನ.17- ಮಾನವನ ಸರ್ವತೋಮುಖ ವಾದ ಲೌಕಿಕ ಬದುಕಿನ ಬೆಳಕನ್ನು ಬೆಳಗುವಲ್ಲಿ ದೇವಾಲಯಗಳ ಪಾತ್ರ ಬಹುಮುಖ್ಯ ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಹೊಸ ಕುಂದುವಾಡದ ಶ್ರೀ ಶಬರಿಮಲೈ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ಇಂದು ಏರ್ಪಾಡಾಗಿದ್ದ ಶ್ರೀ ಗಣೇಶ, ಅಯ್ಯಪ್ಪಸ್ವಾಮಿ, ಷಣ್ಮುಖ, ಆಂಜನೇಯ, ನವಗ್ರಹಗಳ ಪ್ರತಿಷ್ಠಾಪನಾ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಧರ್ಮ ಮತ್ತು ದೇವರು ಎರಡು ಕೂಡ ಮಾನವನ ಲೌಖಿಕ ಬದುಕನ್ನು ಉನ್ನತ ಸ್ಥರಕ್ಕೆ ಕೊಂಡೊಯ್ಯುವ ಎರಡು ಸಾಧನಗಳೆಂದರೆ ತಪ್ಪಿಲ್ಲ. ದೇವಾಲಯಗಳಲ್ಲಿ ಸಿಗುವ ಶಾಂತಿ ಬೇರೆಲ್ಲೂ ಸಿಗಲು ಸಾಧ್ಯವಿಲ್ಲ. ಅಲ್ಲೊಂದು ಸಕಾರಾತ್ಮಕ ಶಕ್ತಿ ಇರುತ್ತದೆ ಎಂದು ಹೇಳಿದರು.

ಮೂರ್ತಿ ಪ್ರತಿಷ್ಠಾಪನೆ ದಿನವೇ ಇಂದು ಯುವಕರು ಅಯ್ಯಪ್ಪ ಸ್ವಾಮಿಯ ಮಾಲೆ ಹಾಕಿರುವುದು ನಿಮ್ಮ ಭಕ್ತಿಯನ್ನು ತೋರಿಸುತ್ತದೆ.

ಪ್ರಾಮಾಣಿಕತೆಯಿಂದ ನೀವು ಬದುಕಿದ್ದೇ ಆದರೆ ಅಯ್ಯಪ್ಪ ಸದಾ ನಿಮ್ಮ ಅಂತರಂಗದಲ್ಲಿ ಬೆಳಗುತ್ತಿರುತ್ತಾನೆ. ಮಕರ ಜ್ಯೋತಿ ಬಗ್ಗೆ ಕೆಲವೊಂದು ಅಭಿಪ್ರಾಯವಿದೆ. ಆದರೆ, ಇಲ್ಲಿ ಎಲ್ಲರ ಬದುಕಲ್ಲೂ ಜ್ಯೋತಿ ಬೆಳಗಲಿ ಎಂದು ಶುಭ ಹಾರೈಸಿದರು.

# ಪೋಷಕರು ಮಕ್ಕಳೊಂದಿಗೆ ಜವಾಬ್ದಾರಿಯಿಂದ ವರ್ತಿಸಬೇಕು



**ಶ್ಯಾಗಲೆಯಲ್ಲಿನ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಬಿ.ಎನ್. ಗಿರೀಶ್ ಕರೆ**

ದಾವಣಗೆರೆ, ನ.17- ಪೋಷಕರು ಮಕ್ಕಳೊಂದಿಗೆ ಜವಾಬ್ದಾರಿಯಿಂದ ವರ್ತಿಸಿ, ಅವರನ್ನು ಸತ್ಪ್ರಜೆಗಳನ್ನಾಗಿಸಬೇಕು ಎಂದು ತಹಶಿಲ್ದಾರ್ ಬಿ.ಎನ್. ಗಿರೀಶ್ ಕರೆ ನೀಡಿದರು.

ತಾಲ್ಲೂಕಿನ ಶ್ಯಾಗಲೆ ಗ್ರಾಮದ ಕುವೆಂಪು ವಿದ್ಯಾಲಯ ಹಮ್ಮಿಕೊಂಡ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಮಕ್ಕಳು ಸದಾ ಪೋಷಕರನ್ನು ಅನುಸರಿಸುವುದರಿಂದ ಪೋಷಕರು ಉತ್ತಮ ನಡೆ - ನುಡಿ ಹೊಂದಬೇಕು. ಕೌಟುಂಬಿಕ ಜಗಳಗಳೂ ಸಹ ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರುತ್ತವೆ. ಮಕ್ಕಳಲ್ಲಿ ದೇಶ ಪ್ರೇಮ, ಸಾಮಾಜಿಕ ಕಳಕಳಿ ತುಂಬಲು ಮುಂದಾಗದಿದ್ದರೆ ದೇಶಕ್ಕೆ ಭವಿಷ್ಯವಿಲ್ಲ. ಸಮಾಜದಲ್ಲಿ ವೈದ್ಯರು, ಇಂಜಿನಿಯರ್‌ಗಳಿಗಿಂತ ಅನ್ನ ನೀಡುವ ರೈತರ ಪಾತ್ರ ಪ್ರಮುಖವಾಗಿದೆ. ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಸ್ಕಾರ ಮೂಡಿಸಲು ಶ್ರಮಿಸಬೇಕು ಎಂದು ಕರೆ ನೀಡಿದರು.

ಕನ್ನಡದ ಹಿರಿಮೆ ಅಪೂರ್ವವಾದದ್ದು, ಯಾವುದೇ ಮಾತೃಭಾಷೆ ಮಾತ್ರ ಅಂತರಂಗದ ಭಾವನೆ ಹೊರಹೊಮ್ಮಿಸಬಲ್ಲದು. ಇಂಗ್ಲಿಷ್‌ನಲ್ಲಿ ಸಂಬಂಧ ವಾಚಕಗಳೇ ಇಲ್ಲ. ಕೇವಲ ಅಂಟಿ ಎಂಬ ಪದವೇ ಎಲ್ಲಾ ಸಂಬಂಧ ಸೂಚಿಸುತ್ತದೆ. ಆದರೆ, ಕನ್ನಡದಲ್ಲಿ ಪ್ರತೀ ಸಂಬಂಧಕ್ಕೂ ತನ್ನದೇ ಅರ್ಥಪೂರ್ಣ ಪದಗಳಿವೆ ಎಂದು ಹೇಳಿದರು.

ಬಿ.ಇ.ಒ ನಿರಂಜನ ಮೂರ್ತಿ ಮಾತನಾಡಿ, ಉತ್ತಮ ಸಮಾಜ ನಿರ್ಮಾಣದಲ್ಲಿ ಶಿಕ್ಷಣದ ಪಾತ್ರ ಮಹತ್ವದ್ದು. ಶಿಕ್ಷಕರು ದೇಶದ ಸತ್ಪ್ರಜೆಗಳನ್ನು ನಿರ್ಮಿಸಲು ಜವಾಬ್ದಾರಿಯಿಂದ ಕೆಲಸ ಮಾಡಬೇಕು ಎಂದರು.

ದಾವಣಗೆರೆ ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕ ಅಶೋಕ ಪಾಳೇದ್ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಗುಣಮಟ್ಟದ ಶಿಕ್ಷಣ ನೀಡುತ್ತಿರುವ ಕುವೆಂಪು ವಿದ್ಯಾಸಂಸ್ಥೆಯ ಕಳಕಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.


ಮಾಜಿ ಸೈನಿಕ ಕುಮಾರ್ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಪ್ರಗತಿಪರ ರೈತ ಉಮೇಶ್ ಕುಮಾರ್ ಮಾತನಾಡಿದರು.

ಸಿದ್ದೇಶ್ವರ ವಿದ್ಯಾಸಂಸ್ಥೆ ಕಾರ್ಯದರ್ಶಿ ಸಿದ್ದೇಶ್, ಗ್ರಾಮ ಪಂಚಾಯತಿ ಅಧ್ಯಕ್ಷ ಮೂರ್ತಯ್ಯ ಮತ್ತು ಸದಸ್ಯರು, ಬಿಜೆಪಿ ಅಧ್ಯಕ್ಷ ದೇವೇಂದ್ರಪ್ಪ, ಕೃಷಿ ಪತ್ತಿನ ಬ್ಯಾಂಕ್ ಅಧ್ಯಕ್ಷ ರೇವಣಸಿದ್ದಪ್ಪ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ನ್ಯಾಮತಿ ತಾಲ್ಲೂಕಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ನ್ಯಾಮತಿ ತಾಲ್ಲೂಕಿನ ಎಲ್ಲಾ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ನ್ಯಾಮತಿ ಬೆಸ್ಕಾಂನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಶ್ರೀನಿವಾಸ್ ಬಿ.ಕೆ. ತಿಳಿಸಿದ್ದಾರೆ.

# ಡಾ. ಆನಂದ್ ತೇಲ್ತುಂಬ್ಡೆ ಬಿಡುಗಡೆಗಾಗಿ ಸಭೆ



ರಾಣೇಬೆನ್ನೂರು

ರಾಣೇಬೆನ್ನೂರು, ಆ.17- ಸುಳ್ಳು ಮೊಕದ್ದಮೆಯಲ್ಲಿ ಬಂಧಿಸಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಮೊಮ್ಮಗ ಡಾ. ಆನಂದ್ ತೇಲ್ತುಂಬ್ಡೆ ಹಾಗೂ 15 ಜನ ಮಾನವ ಹಕ್ಕು ಹೋರಾಟಗಾರರನ್ನು ಬಿಡುಗಡೆ ಮಾಡುವಂತೆ ರಾಷ್ಟ್ರಪತಿಗಳಿಗೆ ಒತ್ತಾಯಿಸಲು ರಾಣೇಬೆನ್ನೂರಿನಲ್ಲಿ ಸಭೆ ನಡೆಯಲಿದೆ ಎಂದು ಸ್ವಾಭಿಮಾನಿ ದಲಿತ ಶಕ್ತಿ ರಾಜ್ಯಾಧ್ಯಕ್ಷ ಶಿವಲಿಂಗಂ ಹೇಳಿದರು.

ಇಲ್ಲಿನ ನಗರಸಭೆ ಕ್ರೀಡಾಂಗಣದಲ್ಲಿ ಇದೇ ದಿನಾಂಕ 21 ರಂದು ನಡೆಯುವ ಈ ಸಭೆಯ ಸಮ್ಮುಖ ವಹಿಸುವ ಶ್ರೀ ಚನ್ನಬಸವಾನಂದ ಸ್ವಾಮಿಗಳು, ಪ್ರಸ್ತುತ ಸಂದರ್ಭದಲ್ಲಿ ಸಾಮಾಜಿಕ ಕಾರ್ಯಕರ್ತರು ಎದುರಿಸುವ ಸಮಸ್ಯೆ ಹಾಗೂ ಪರಿಹಾರ ಕುರಿತು ಉಪನ್ಯಾಸ ನೀಡುವರು. ಡಾ. ಆನಂದ ಅವರ ಹೆಂಡತಿ ರಮಾಬಾಯಿ ಅಂಬೇಡ್ಕರ್, ಶಾಸಕ ಸತೀಶ್ ಜಾರಕಿಹೊಳಿ ಭಾಗವಹಿಸಲಿದ್ದಾರೆ.

ಹಾವೇರಿ ಜಿಲ್ಲೆಯ 8 ತಾಲ್ಲೂಕು, ಬಳ್ಳಾರಿ ಹಾಗೂ ಚಿತ್ರದುರ್ಗ ಜಿಲ್ಲೆಯ ತಲಾ ಎರಡು ತಾಲ್ಲೂಕುಗಳು , ತಮಿಳುನಾಡಿನ ತಿರುಪತ್ತೂರು, ಕುಡಿಯಾತಂ ಜಿಲ್ಲೆಗಳ ಒಟ್ಟು 600 ಹಳ್ಳಿಗಳ ಜನರು ಸಹಿ ಮಾಡಿದ ಪತ್ರವನ್ನು ತಹಶೀಲ್ದಾರ್ ಮೂಲಕ ರಾಷ್ಟಪತಿಗಳಿಗೆ ಕಳಿಸಲಾಗುತ್ತದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಶಿವಲಿಂಗಂ ತಿಳಿಸಿದ್ದಾರೆ.

## ಕುಣಿಬೆಳಕೆರೆಯಲ್ಲಿ ಇಂದು ದೊಡ್ಡ ಎಡೆ ಜಾತ್ರೆ

ಮಲೇಬೆನ್ನೂರು ಸಮೀಪದ ಕುಣಿಬೆಳಕೆರೆ ಗ್ರಾಮದ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ದೊಡ್ಡ ಎಡೆ ಜಾತ್ರೆ ಮತ್ತು ಸಾಮೂಹಿಕ ವಿವಾಹ ಇಂದು ಬೆಳಗ್ಗೆ 10 ಗಂಟೆಗೆ ಜರುಗಲಿದೆ

## ಹರಿಹರ ತಾ.ನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹರಿಹರ ತಾಲ್ಲೂಕಿನ ಭಾನುವಳ್ಳಿ, ಬೆಳ್ಳೂಡಿ, ಹನಗವಾಡಿ, ಬನ್ನಿಕೋಡು, ಕೆ. ಬೇವಿನಹಳ್ಳಿ, ಕಮಲಾಪುರ, ಹೊಳೆಸಿರಿಗೆರೆ, ಲಕ್ಕಶೆಟ್ಟಿಹಳ್ಳಿ, ಕೆ.ಬಿ. ದೇವರಬೆಳಕೆರೆ, ಸಾಲಕಟ್ಟೆ, ಮಿಟ್ಲಕಟ್ಟೆ ಮತ್ತು ಕಡ್ಲೆಗೊಂದಿ, ಮಲೇಬೆನ್ನೂರು, ಹಾಲಿವಾಣ, ಹರ್ಲಹಳ್ಳಿ, ನಂದಿತಾವರೆ, ಎಲವಟ್ಟಿ, ಕುಂಬಳೂರು, ನಂದಿಗುಡಿ, ವಾಸನ, ಕಡರನಾಯಕನಹಳ್ಳಿ, ಕೊಕ್ಕನೂರು, ಮೂಗಿನಗೊಂದಿ, ಜಿ.ಟಿ. ಕಟ್ಟೆ, ಗೋವಿನಹಾಳು ಮತ್ತು ಕಾರ್ಗಿಲ್ ಇಂಡಸ್ಟ್ರೀಸ್ ಲಿ.ಗೆ ವಿತರಣೆಯಾಗುವ ಎಲ್ಲಾ 11 ಕೆ.ವಿ. ಮಾರ್ಗಗಳಿಗೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಹೊನ್ನಾಳಿಯಲ್ಲಿ ಇಂದು ವಿದ್ಯುತ್ ವ್ಯತ್ಯಯ

220 ಕೆವಿ ಬಿದರಗಡ್ಡೆ, 66 ಕೆವಿ ಹೊನ್ನಾಳಿ, 66 ಕೆವಿ ಸಾಸ್ವೆಹಳ್ಳಿ, 66 ಕೆವಿ ಕತ್ತಿಗೆ, 66 ಕೆವಿ ಕುಂದೂರು, ವಿದ್ಯುತ್ ವಿತರಣಾ ಕೇಂದ್ರಗಳಿಂದ ವಿದ್ಯುತ್ ಸರಬರಾಜಾಗುವ ಹಳ್ಳಿಗಳಿಗೆ ಮತ್ತು ಹೊನ್ನಾಳಿ ಪಟ್ಟಣಕ್ಕೆ ವಿದ್ಯುತ್ ಸರಬರಾಜಿನಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವ್ಯತ್ಯವಾಗಲಿದೆ.

## ನಗರದಲ್ಲಿ ಇಂದು ಪಿಎಲ್‌ಡಿ ಬ್ಯಾಂಕ್ ಸಭೆ

ದಾವಣಗೆರೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ 84ನೇ ಸರ್ವ ಸದಸ್ಯರ ಸಭೆಯು ಇಂದು ಬೆಳಿಗ್ಗೆ 11 ಗಂಟೆಗೆ ಶ್ರೀ ತರಳಬಾಳು ಸಭಾಭವನದಲ್ಲಿ ನಡೆಯಲಿದೆ.

## ಕುಂಬಳೂರು ಗ್ರಾಮದ ಹಳೇಮನಿ ಚನ್ನಪ್ಪ ನಿಧನ



ಹರಿಹರ ತಾ, ಕುಂಬಳೂರು ಗ್ರಾಮದ ವಾಸಿ ನಿವೃತ್ತ ಶಿಕ್ಷಕರಾದ

**ಶ್ರೀ ಹಳೇಮನಿ ಚನ್ನಪ್ಪ** (78 ವರ್ಷ)

ಇವರು, ದಿನಾಂಕ 17.11.2021ರ ಬುಧವಾರ ರಾತ್ರಿ 10.30ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 18.11.2021ರ ಗುರುವಾರ ಮಧ್ಯಾಹ್ನ 2 ಗಂಟೆಗೆ ಕುಂಬಳೂರಿನಲ್ಲಿ ನೆರವೇರಲಿದೆ.

## ಬಾರ್ ಮುಂದೆ ಗಲಾಟೆ : ಯುವಕನಿಗೆ ಚಾಕು ಇರಿತ



ಹರಿಹರ, ನ.17- ನಗರದ ಶಿವಮೊಗ್ಗ ರಸ್ತೆಯ ಸ್ವಪ್ನ ಬಾರ್ ಮುಂಭಾಗದಲ್ಲಿ ಇಬ್ಬರು ಯುವಕರ ನಡುವೆ ನಡೆದ ಗಲಾಟೆಯಲ್ಲಿ ಓರ್ವ ಯುವಕನ ಹೊಟ್ಟೆಗೆ ಚಾಕು ಹಾಕಿದ ಘಟನೆ ನಡೆದಿದೆ.

ಮಹಾತ್ಮಗಾಂಧಿ ಕೊಳಚೆ ಪ್ರದೇಶ ಮತ್ತು ವಿಜಯ ನಗರ ಬಡಾವಣೆಯ ಯುವಕರಿಬ್ಬರೂ ಜೊತೆಯಲ್ಲಿಯೇ ಗಾರೆ ಕೆಲಸ ಮಾಡುತ್ತಿದ್ದರು. ಎಂದಿನಂತೆ ಇಂದು ಸಹ ಇಬ್ಬರು ಜೊತೆಗೆ ಕೆಲಸ ಮುಗಿಸಿ, ಮನೆಗೆ ಹೋಗುವಾಗ ಶಿವಮೊಗ್ಗ ರಸ್ತೆಯ ಸ್ವಪ್ನ ಬಾರ್‌ನಲ್ಲಿ ಇಬ್ಬರೂ ಜೊತೆಗೆ ಮದ್ಯಪಾನ ಮಾಡಿದ್ದಾರೆ. ಯಾವುದೋ ಕ್ಷುಲ್ಲಕ ವಿಚಾರಕ್ಕೆ ಜಗಳ ಪ್ರಾರಂಭವಾಗಿ ಅದು ವಿಕೋಪಕ್ಕೆ ತಿರುಗಿ ಓರ್ವ ಯುವಕನ ಬಲ ಭಾಗದ ಪಕ್ಕೆಗೆ ಮತ್ತು ಎಡಭಾಗದ ಎದೆಗೆ ಚಾಕುವಿನಿಂದ ಇರಿದಿದ್ದು, ಗಾಯಗೊಂಡ ಯುವಕನಿಗೆ ಸ್ಥಳೀಯ ಜನರು ಆಸ್ಪತ್ರೆಗೆ ರವಾನಿಸಿದ್ದಾರೆ. ಯುವಕನಿಗೆ ಸಾರ್ವಜನಿಕ ಆಸ್ಪತ್ರೆಯ ವೈದ್ಯರು ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗೆ ಜಿಲ್ಲಾ ಆಸ್ಪತ್ರೆಗೆ ಕಳಿಸಿಕೊಟ್ಟಿದ್ದಾರೆ. ಪ್ರಕರಣ ಹರಿಹರ ನಗರ ಠಾಣೆಯಲ್ಲಿ ದಾಖಲಾಗಿದೆ.

## ಡಿಕೆಶಿ-ಸಿದ್ದು ನಡುವಿನ ಬೇಗುದಿ ಸ್ಫೋಟ

**(1ನೇ ಪುಟದಿಂದ)** ತುಪ್ಪವಾಗಿ ಪರಿಣಮಿಸಿದೆ. ಆ ಕೋಪವನ್ನೇ ನಿನ್ನೆ ನಡೆದ ಅಲ್ಪಸಂಖ್ಯಾತರ ಸಭೆಯಲ್ಲಿ ಪರೋಕ್ಷವಾಗಿ ಸಿದ್ದರಾಮಯ್ಯ ವಿರುದ್ಧ ತೀರಿಸಿಕೊಂಡಿದ್ದಾರೆ ಎಂದು ಪಕ್ಷದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಶಿವಕುಮಾರ್ ಪ್ರತಿ ವೇದಿಕೆಯಲ್ಲೂ ನಮ್ಮ ವ್ಯಕ್ತಿ ಪೂಜೆ ಮಾಡಬೇಡಿ, ಪಕ್ಷ ಪೂಜೆ ಮಾಡಿ ಎಂದು ಪದೇ ಪದೇ ಹೇಳುವ ಮೂಲಕ ಸಿದ್ದರಾಮಯ್ಯ ಅವರಿಗೆ ಟಾಂಗ್ ಕೊಡುತ್ತಿದ್ದಾರೆ. ಪರಿಷತ್ ಚುನಾವಣಾ ಸಂದರ್ಭದಲ್ಲೇ ಉಭಯ ನಾಯಕರ ಬೇಗುದಿ ಬಹಿರಂಗಗೊಂಡು ಕಾರ್ಯಕರ್ತರ ಬಾಯಿಗೆ ಆಹಾರವಾಗಿದೆ.

## ರೈಲ್ವೇ ಕೆಳ ಸೇತುವೆಯಲ್ಲಿ ಮತ್ತೆ ನೀರು ಸಂಗ್ರಹ

**(1ನೇ ಪುಟದಿಂದ)** ಹರಿದು ಹೋಗಿತ್ತು. ವಾಹನಗಳ ಹಾಗೂ ಜನರ ಓಡಾಟವನ್ನು ಗಮನಿಸಿದ ವೀರೇಶ್ ಸ್ವಲ್ಪ ಹೊತ್ತು ವೀಕ್ಷಣೆ ಮಾಡಿದರು. ಮುಂದೆ ಸಾಗುವ ನೀರು ವಾಪಸ್ ಬರುವಂತೆ ಅಡ್ಡಲಾಗಿ ಸ್ಮಾರ್ಟ್ ಸಿಟಿಯಿಂದ ನಿರ್ಮಿಸುತ್ತಿರುವ ಚರಂಡಿಗೆ ಮಣ್ಣು ಮತ್ತು ಚೀಲಗಳನ್ನು ತುಂಬಿ ಇಟ್ಟ ಕಾರಣ ನೀರು ನಿಲ್ಲುವಂತಾಗಿತ್ತು. ಕೂಡಲೇ ತೆರವುಗೊಳಿಸಿದ್ದರಿಂದ ನೀರು ಸರಾಗವಾಗಿ ಹರಿದು ಹೋಗುವಂತಾಯಿತು. ನೀರು ಹರಿಯುವಿಕೆ ನಿಂತಿದ್ದರಿಂದ ಮೇಯರ್ ವೀರೇಶ್ ವಾಪಸ್ ಆದರು.

## ಮಾಗನೂರು ರಾಜಶೇಖರಪ್ಪ ಶಾಲೆಯಲ್ಲಿ ಮಕ್ಕಳ ದಿನಾಚರಣೆ



ದಾವಣಗೆರೆ, ನ.17- ನಗರದ ಮಾಗನೂರು ರಾಜಶೇಖರಪ್ಪ ಹಿರಿಯ ಪ್ರಾಥಮಿಕ ಶಾಲೆ ತರಳುಬಾಳು ಬಡಾವಣೆಯಲ್ಲಿ ಸ್ವರ್ಣ ಭಾರತಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆಯ ವತಿಯಿಂದ ಮಕ್ಕಳ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಉಪನಿರ್ದೇಶಕರ ಕಚೇರಿ ಇಒ ಬಿ.ಎಸ್. ಜಗದೀಶ್ವರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಮಾಗನೂರು ರಾಜಶೇಖರ ಹಿರಿಯ ಪ್ರಾಥಮಿಕ ಶಾಲೆ ಮುಖ್ಯೋಪಾಧ್ಯಾಯ ಬಿ.ಅಜ್ಜಣ್ಣ ಅವರು ಉಪಸ್ಥಿತರಿದ್ದರು. ಅಧ್ಯಕ್ಷರಾದ ಭಾರತಿ ಕೇಶವ್ ಅವರು ಅಧ್ಯಕ್ಷತೆ ವಹಿಸಿದ್ದರು. ಪುಷ್ಪ ನಾರಾಯಣಸ್ವಾಮಿ ಉಪಸ್ಥಿತರಿದ್ದರು.

## ಮೊಬೈಲ್ ಆಪ್ ಸಾಲ ಕಂಪನಿಯಿಂದ 500 ಕೋಟಿ ರೂ. ವಿದೇಶಕ್ಕೆ

ನವದೆಹಲಿ, ನ. 17 – ಮೊಬೈಲ್ ಆಪ್ ಮೂಲಕ ತಕ್ಷಣವೇ ಸಾಲ ನೀಡುತ್ತಿದ್ದ ಕಂಪನಿಯೊಂದು, ನಿಯಮ ಬಾಹಿರವಾಗಿ ವಿದೇಶಕ್ಕೆ 500 ಕೋಟಿ ರೂ. ಕಳಿಸಿದೆ ಎಂದು ಸಿ.ಬಿ.ಡಿ.ಟಿ. ತಿಳಿಸಿದೆ.

ದೆಹಲಿ ಹಾಗೂ ಹರಿಯಾಣದ ಗುರ್ಗಾಂವ್‌ನಲ್ಲಿ ದಾಳಿ ನಡೆಸಿದ ಸಂದರ್ಭದಲ್ಲಿ ಈ ವಿಷಯ ಬೆಳಕಿಗೆ ಬಂದಿರುವುದಾಗಿ ಸಿ.ಬಿ.ಡಿ.ಟಿ. ಹೇಳಿದೆ.

ಸಾಲ ವಿತರಿಸುವಾಗ ಗ್ರಾಹಕರ ಮೇಲೆ ಅತಿ ಹೆಚ್ಚಿನ ಶುಲ್ಕ ವಿಧಿಸಲಾಗುತ್ತಿತ್ತು. ಇದು ಸಾಲ ಪಡೆದವರ ಮೇಲಿನ ಹೊರೆ ಹೆಚ್ಚಿಸುತ್ತಿತ್ತು. ಈ ಕಂಪನಿ ಸೇವೆಗಳನ್ನು ಖರೀದಿಸುವ ಹೆಸರಿನಲ್ಲಿ ವಿದೇಶಕ್ಕೆ 500 ಕೋಟಿ ರೂ. ರವಾನಿಸಿದೆ. ತನಿಖೆ ನಡೆಸಿದಾಗ ಸೇವೆಗಳಿಗೆ ನಕಲಿ ಹಾಗೂ ದುಬಾರಿ ಹೆಸರಿನಲ್ಲಿ ಪಾವತಿ ಮಾಡಿರುವುದು ಕಂಡು ಬಂದಿದೆ ಎಂದು ಸಿ.ಬಿ.ಡಿ.ಟಿ. ಹೇಳಿದೆ. ಈ ಆಪ್ ಹಿಂದೆ ನೆರೆಯ ದೇಶದ ವ್ಯಕ್ತಿಯೋರ್ವ ಇರುವುದು ಕಂಡು ಬಂದಿದೆ. ವ್ಯಕ್ತಿ ಸೇರಿದಂತೆ ಹಲವರನ್ನು ವಿಚಾರಣೆಗೆ ಒಳಪಡಿಸಲಾಗಿದೆ.

## ದುರ್ಗಮ ಪ್ರದೇಶದಲ್ಲಿ ರಸ್ತೆ ನಿರ್ಮಿಸಲು 33 ಸಾವಿರ ಕೋಟಿ ರೂ.

ನವದೆಹಲಿ, ನ. 17 – ದುರ್ಗಮ ಪ್ರದೇಶಗಳಲ್ಲಿ 32,152 ಕಿ.ಮೀ.ಗಳ ರಸ್ತೆಗಳನ್ನು 33,822 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸುವ ಪ್ರಸ್ತಾವನೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ.

ಆಂಧ್ರ ಪ್ರದೇಶ, ಛತ್ತೀಸ್‌ಘಡ, ಜಾರ್ಖಂಡ್, ಮಹಾರಾಷ್ಟ್ರ ಹಾಗೂ ಒಡಿಶಾಗಳ ಬುಡಕಟ್ಟು ಪ್ರದೇಶಗಳಲ್ಲಿ ಟೆಲಿಕಾಂ ಸಂಪರ್ಕ ಸುಧಾರಣೆಗಾಗಿ 7,287 ಹಳ್ಳಿಗಳಲ್ಲಿ ಮೊಬೈಲ್ ಸ್ಥಾವರ ಸ್ಥಾಪಿಸುವ ಪ್ರಸ್ತಾವನೆಗೂ ಸಂಪುಟ ಒಪ್ಪಿಗೆ ನೀಡಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಮಾಹಿತಿ ಮತ್ತು ಸಂಪರ್ಕ ಸಚಿವ ಅನುರಾಗ್ ಠಾಕೂರ್, ಟೆಲಿಕಾಂ ಸ್ಥಾವರಗಳ ಸ್ಥಾಪನೆಗಾಗಿ ಮುಂದಿನ ಐದು ವರ್ಷಗಳಲ್ಲಿ 6,466 ಕೋಟಿ ರೂ. ವೆಚ್ಚ ಮಾಡಲಾಗುವುದು ಎಂದಿದ್ದಾರೆ.

# ಪರಿಶ್ರಮದ ಮೇಲೆ ನಂಬಿಕೆ ಇರಬೇಕು



ಆವರಗೆರೆಯ ಶ್ರೀ ಸಿದ್ದಲಿಗೇಶ್ವರ ಶಾಲೆಯ ಕಾರ್ಯಕ್ರಮದಲ್ಲಿ ಈಶ್ವರಮ್ಮ ಪ್ರೌಢಶಾಲೆಯ ಉಪ ಪ್ರಾಂಶುಪಾಲರಾದ ಶಶಿರೇಖಾ

ದಾವಣಗೆರೆ, ನ.17- ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ದಾವಣಗೆರೆ ವಿಜ್ಞಾನ ಕೇಂದ್ರ, ಕಾಯಕ ಯೋಗಿ ಶ್ರೀ ಬಸವ ಪರಿಸರ ವೇದಿಕೆ ಮತ್ತು ಶ್ರೀ ಸಿದ್ದಲಿಂಗೇಶ್ವರ ವಿದ್ಯಾಸಂಸ್ಥೆ (ಆವರಗೆರೆ) ಇವರುಗಳ ಸಂಯುಕ್ತಾಶ್ರಯದಲ್ಲಿ ಮಕ್ಕಳ ದಿನಾಚರಣೆಯನ್ನು ಶ್ರೀ ಗುರು ಪಂಚಾಕ್ಷರಿ ಗವಾಯಿ ಮೆ ಮೋ ರಿ ಯ ಲ್ ಕಾಂಪೋಜಿಟ್ ಶಾಲೆಯಲ್ಲಿ ಆಚರಿಸಲಾಯಿತು.

ಈಶ್ವರಮ್ಮ ಪ್ರೌಢ ಶಾಲೆಯ ಉಪ ಪ್ರಾಂಶುಪಾಲ ರಾದ ಶ್ರೀಮತಿ ಜಿ.ಎಸ್. ಶಶಿರೇಖಾ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದರು. ಸಾಧನೆ ಮಾಡಿದ ವ್ಯಕ್ತಿಗಳ ಉದಾಹರಣೆ ನೀಡಿದ ಅವರು, ಮಕ್ಕಳಿಗೆ ಪರಿಶ್ರಮ ಮತ್ತು ಅದೃಷ್ಟದ ವ್ಯತ್ಯಾಸವನ್ನು ತಿಳಿಸುವ ಮೂಲಕ ಮಕ್ಕಳಿಗೆ ಅವರ ಪರಿಶ್ರಮದ ಮೇಲೆ ನಂಬಿಕೆ ಇರಬೇಕು ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕರ್ನಾಟಕ ವಿಜ್ಞಾನ ಪರಿಷತ್ ಜಿಲ್ಲಾ ಸಮಿತಿ ಸದಸ್ಯರಾದ ಹೆಚ್. ಚಂದ್ರಪ್ಪ ಅವರು, ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಒತ್ತು ನೀಡಿದಂತಹ ಜವಾಹರಲಾಲ್ ನೆಹರೂರವರ ವ್ಯಕ್ತಿತ್ವದ ಬಗ್ಗೆ ಮಕ್ಕಳಿಗೆ ತಿಳಿಸುವ ಮೂಲಕ ಅಭಿಪ್ರಾಯವನ್ನು ಹಂಚಿಕೊಂಡರು.

ಮತ್ತೋರ್ವ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಜಿಲ್ಲಾ ಬಾಲ ವಿಜ್ಞಾನಿ ಪ್ರಶಸ್ತಿ ಪುರಸ್ಕೃತ ಕು|| ಆಪ್ತಾ ಶೆಟ್ಟಿ ಮಾತನಾಡಿ, ವಿದ್ಯಾರ್ಥಿಗಳಾದ ನಾವು ಸಿಕ್ಕಿರುವ ಅವಕಾಶಗಳನ್ನು ಬಳಸಿಕೊಳ್ಳಬೇಕು. ಸೋಲು ಮತ್ತು ಗೆಲುವಿಗೆ ಒತ್ತು ಕೊಡದೆ, ಪ್ರಯತ್ನವನ್ನು ಮಾಡಬೇಕು ಎಂದು ತಿಳಿಸಿದರು.

ಇನ್ನೋರ್ವ ಅತಿಥಿಯಾಗಿ ಆಗಮಿಸಿದ್ದ ಆರ್. ಎಲ್. ಲಾ ಕಾಲೇಜಿನ ಪ್ರಾಧ್ಯಾಪಕರಾದ ಕಾ|| ಶಾಂತಿಕ ಮುರುಡೇಶ್ವರ್ ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಯು ಗುರಿಯನ್ನು ಹೊಂದಿರಬೇಕು. ಆ ಗುರಿಯ ಕಡೆಗೆ ಗಮನ ಮತ್ತು ಪ್ರಯತ್ನ ಇದ್ದರೆ ಮಾತ್ರ ಗುರಿ ಸಾಧಿಸಲು ಸಾಧ್ಯ ಎಂದು ತಿಳಿಸಿದರು.

ಬಿ.ಐ.ಇ.ಟಿ. ಕಾಲೇಜು ಆಂಗ್ಲ ಭಾಷಾ ಉಪನ್ಯಾಸಕರು ಹಾಗೂ ಶಾಲೆಯ ನಿರ್ದೇಶಕ ರಾದ ಶ್ರೀಮತಿ ಎ.ಹೆಚ್. ಸುಗ್ಗಲಾದೇವಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಜೀವನದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಮನಸ್ಸು ಮಗು ತರಹ ಇರಬೇಕು ಹಾಗೂ ಎಲ್ಲಾ ವಿಷಯಗಳಲ್ಲು ಕುತೂಹಲ ಹೊಂದಿರಬೇಕು. ಆಗ ಮಾತ್ರ ಹೆಚ್ಚಿನ ವಿಷಯಗಳನ್ನು ತಿಳಿಯಬಹುದು ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಕಾರ್ಯದರ್ಶಿ ಎಂ. ಗುರುಸಿದ್ದಸ್ವಾಮಿ, ಶಾಲೆಯ ಹಿರಿಯ ವಿದ್ಯಾರ್ಥಿಗಳಾದ ಸುಶ್ಮಿತಾ ಮತ್ತು ಅನುಷ ಅವರು ಉಪಸ್ಥಿತರಿದ್ದರು.

ಹತ್ತನೇ ತರಗತಿಯ ವಿದ್ಯಾರ್ಥಿನಿ ಕು|| ಶ್ರೀದೇವಿ ನಿರೂಪಿಸಿದರು. ಸ್ಫೂರ್ತಿ ಮತ್ತು ಸಂಗಡಿಗರು ಪ್ರಾರ್ಥನೆ ಮಾಡಿದರು. ಕು|| ಚೇತನ್ ಎಸ್.ಪಿ. ವಂದಿಸಿದರು.

## ಹರಿಹರ ತಾ.ಕರವೇಗೆ ರಮೇಶ್ ಅಧ್ಯಕ್ಷ



ಹರಿಹರ, ನ.17- ಹರಿಹರ ತಾಲ್ಲೂಕು ಕರ್ನಾಟಕ ರಕ್ಷಣಾ ವೇದಿಕೆಗೆ ವೈ. ರಮೇಶ್ ಮಾನೆ ಅವರನ್ನು ತಾಲ್ಲೂಕು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಕಾರ್ಯಾಧ್ಯಕ್ಷರಾಗಿ ಪ್ರೀತಂ ಬಾಬು ಆಯ್ಕೆಯಾಗಿದ್ದು, ಜಿಲ್ಲಾಧ್ಯಕ್ಷ ಜಮ್ನಳ್ಳಿ ನಾಗರಾಜ ದೃಢೀಕರಣ ಪತ್ರ ನೀಡಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಲೋಕೇಶ್, ದಾವಣಗೆರೆ ತಾಲ್ಲೂಕು ಅಧ್ಯಕ್ಷ ಸೈಯದ್ ನಜೀರ್, ಜಿಲ್ಲಾ ಯುವ ಘಟಕದ ಅಧ್ಯಕ್ಷ ಶ್ರೇಯಸ್, ಬೀರಪ್ಪ, ಜಿಲ್ಲಾ ಕಾರ್ಯಾಧ್ಯಕ್ಷ ನಾಗರಾಜ ಗೌಡ, ನಾಗರಾಜಪ್ಪ ಆದಾಪುರ, ರಮೇಶ್ ಮಾನೆ, ಪ್ರೀತಂ ಬಾಬು ಇನ್ನಿತರರಿದ್ದರು.

## 24 ಲಕ್ಷ ಆನ್‌ಲೈನ್ ಲೈಂಗಿಕ ಶೋಷಣೆ ಪ್ರಕರಣ : ಇಂಟರ್‌ಪೋಲ್ ವರದಿ

ನವದೆಹಲಿ, ನ. 17 – 2017-20ರ ಮೂರು ವರ್ಷಗಳ ಅವಧಿಯಲ್ಲಿ ಆನ್‌ಲೈನ್ ಮೂಲಕ ಮಕ್ಕಳ ಲೈಂಗಿಕ ಶೋಷಣೆ ನಡೆದ 24 ಲಕ್ಷ ಪ್ರಕರಣಗಳು ಭಾರತದಲ್ಲಿ ವರದಿಯಾಗಿವೆ. ಶೋಷಣೆಗೆ ಗುರಿಯಾದ ಬಾಲಕಿಯರಲ್ಲಿ ಶೇ.80ರಷ್ಟು 14 ವರ್ಷದೊಳಗಿನವರು ಎಂದು ಇಂಟರ್‌ಪೋಲ್ ಮಾಹಿತಿ ತಿಳಿಸಿದೆ.

ಈ ವರದಿ ಹಿನ್ನೆಲೆಯಲ್ಲಿ, ಆನ್‌ಲೈನ್ ಮೂಲಕ ಶೋಷಣೆ ಮಾಡುತ್ತಿದ್ದವರ ವಿರುದ್ಧ ಸಿಬಿಐ ಬೃಹತ್ ಕಾರ್ಯಾಚರಣೆ ಆರಂಭಿಸಿದೆ. ಅವಹೇಳನಕಾರಿ ಅಂಶಗಳನ್ನು ಪ್ರಸಾರ ಮಾಡುತ್ತಿದ್ದ ಹಲವು ವೆಬ್ ತಾಣಗಳನ್ನೂ ಸಿಬಿಐ ಪರಿಶೀಲಿಸುತ್ತಿದೆ.

# ಸನ್ಮಾನ ಸಾಮಾಜಿಕ ಜವಾಬ್ದಾರಿ ಮತ್ತು ಕಾಳಜಿ ಹೆಚ್ಚಿಸುತ್ತದೆ

**ಹರಪನಹಳ್ಳಿ : ಬಾಗಳಿ ಕಾರ್ಯಕ್ರಮದಲ್ಲಿ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಸಂಗಪ್ಪನವರ್**



ಹರಪನಹಳ್ಳಿ, ನ.17- ಸನ್ಮಾನ, ಹಾರ, ತುರಾಯಿ ಬದಲು ಸಮಾಜಮುಖಿ ಕಾರ್ಯ ಕೈಗೊಳ್ಳೋಣ ಎಂದು ವಿಜಯನಗರ ಜಿಲ್ಲೆಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಸಂಗಪ್ಪನವರ್ ಹೇಳಿದರು.

ತಾಲ್ಲೂಕಿನ ಬಾಗಳಿ ಗ್ರಾಮದಲ್ಲಿ ಬಡಮ್ಮನವರ ಶಂಕರಮ್ಮ, ಕೆಂಚಪ್ಪ ಕಲ್ಯಾಣ ಮಂಟಪದಲ್ಲಿ ಮಾಡ್ಲಗೇರಿ ಹಾಗೂ ಬಾಗಳಿ ಕ್ಲಸ್ಟರ್‌ನ ಶಿಕ್ಷಕರು ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಹಾರ ಶಾಲು ಸೇರಿದಂತೆ ಸನ್ಮಾನಕ್ಕೆ ತಗುಲುವ ವೆಚ್ಚವನ್ನು ಸಮಾಜಮುಖಿ ಕಾರ್ಯಗಳಿಗೆ ಬಳಸೋಣ ಎಂದು ಸಲಹೆ ನೀಡಿದರು.

ನೀವು ಈಗ ಪ್ರೀತಿಯಿಂದ ನೀಡಿದ ಸನ್ಮಾನ ಹೆಚ್ಚು ಹೆಚ್ಚು ಸಾಮಾಜಿಕ ಜವಾಬ್ದಾರಿ ಹಾಗೂ ಕಾಳಜಿಯನ್ನು ಹೆಚ್ಚಿಸುತ್ತಾ ಹೋಗುತ್ತದೆ ಎಂದರು.

ಸನ್ಮಾನ ಸ್ವೀಕರಿಸಿದ ನಾಟಿ ವೈದ್ಯ ಡಾ. ಬಿ.ಬಿ. ಹೊಸೂರಪ್ಪ ಮಾತನಾಡಿ, ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು, ಶೈಕ್ಷಣಿಕವಾಗಿ ತಾಲ್ಲೂಕಿಗೆ ಹೆಸರು ತರಬೇಕು ಎಂದು ಕರೆ ನೀಡಿದರು.

ಶಿಕ್ಷಕರ ಸಂಘದ ರಾಜ್ಯ ಘಟಕದ ಉಪಾಧ್ಯಕ್ಷೆ ಜಿ. ಪದ್ಮಲತಾ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಸಿದ್ದಲಿಂಗನಗೌಡ, ಶಿಕ್ಷಕರ ಸಂಘದ ತಾಲ್ಲೂಕು ಅಧ್ಯಕ್ಷ ಆರ್. ಪದ್ಮರಾಜ್, ಖಜಾಂಚಿ ಕೊಟ್ರೇಶ್, ನಿರ್ದೇಶಕರಾದ ಬಿ.ರಾಜಶೇಖರ್, ಕೆ.ನಟರಾಜ್, ಎಸ್. ರಾಮಪ್ಪ, ಪಿ. ಗಣೇಶ್, ದೇವೇಂದ್ರಗೌಡ, ಶಿಕ್ಷಕರ ಪತ್ತಿನ ಬ್ಯಾಂಕ್ ಅಧ್ಯಕ್ಷ ಬಿ.ಮಂಜುನಾಥ್, ಬಿ.ರತ್ನಮ್ಮ, ಬಂದಮ್ಮ, ಕೊಟ್ರಮ್ಮ, ಜಿ.ಮಹಾದೇವಮ್ಮ, ಕೆ.ಮನ್ಸೂರು, ಎಂ.ಷರೀಫ್, ಪಾಂಡು ಬಡಿಗೇರ, ಅರ್ಜುನ ಪರಸಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಬಸವರಾಜ್, ಎಂ.ರಮೇಶ್ ಸೇರಿದಂತೆ ಇತರರು ಇದ್ದರು.

# ನಾಳೆ 'ಮುಗಿಲ್ ಪೇಟೆ' ರಿಲೀಸ್, ಇದು ಕೌಟುಂಬಿಕ ಚಿತ್ರ

**ನಟ ಮನೋರಂಜನ್**

ದಾವಣಗೆರೆ, ನ.17- ರೊಮ್ಯಾಂಟಿಕ್, ಆ್ಯಕ್ಷನ್, ಸೆಂಟಿಮೆಂಟ್ ಗಳಿಂದ ಕೂಡಿರುವ ಕೌಟುಂಬಿಕ ಕಥಾ ವಸ್ತುವುಳ್ಳ 'ಮುಗಿಲ್ ಪೇಟೆ' ಚಿತ್ರ ಕುಟುಂಬ ಸಮೇತ ಕುಳಿತು ನೋಡುವಂತಹ ಚಿತ್ರ ಎಂದು ಚಿತ್ರದ ನಾಯಕ, ಕ್ರೇಜಿ ಸ್ಟಾರ್ ರವಿಚಂದ್ರನ್ ಪುತ್ರ ಮನೋರಂಜನ್ ಹೇಳಿದರು.

ಮೊನ್ನೆ ನಗರಕ್ಕಾಗಮಿಸಿದ್ದ ಅವರು ನೂತನ ಕಾಲೇಜಿನಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಾ, ಸಾಹೇಬ, ಬೃಹಸ್ಪತಿ ಸಿನಿಮಾಗಳ ನಂತರ ನನ್ನ ಮೂರನೇ ಚಿತ್ರವಾದ 'ಮುಗಿಲ್ ಪೇಟೆ' ನಾಡಿದ್ದು ದಿನಾಂಕ 19ರಂದು ಬಿಡುಗಡೆಯಾಗುತ್ತಿರುವುದಾಗಿ ಹೇಳಿದರು.

ಪೂನಾದ ಕಯಾದು ಲೋಹರ್ ನಾಯಕಿಯಾಗಿ ಅಭಿನಯಿಸುತ್ತಿದ್ದು, ಚಿತ್ರದಲ್ಲಿ 6 ಹಾಡುಗಳು, ನಾಲ್ಕು ಫೈಟ್‌ಗಳಿವೆ. ಶ್ರೀಧರ್ ವಿ ಸಂಭ್ರಮ್ ಸಂಗೀತ ನೀಡಿದ್ದಾರೆ. ರವಿವರ್ಮ, ವಿಜಯ ಮಾಸ್ಟರ್ ಅವರುಗಳ ಸಾಹಸವಿದೆ. ಅವಿನಾಶ್, ತಾರಾ, ರಂಗಾಯಣ ರಘು ಇತರರು ಚಿತ್ರದಲ್ಲಿದ್ದಾರೆ ಎಂದು ಮಾಹಿತಿ ನೀಡಿದರು.

ಬೆಂಗಳೂರು, ತೀರ್ಥಹಳ್ಳಿ, ಚಿಕ್ಕಮಗಳೂರು, ಕುಂದಾಪುರ, ಸಕಲೇಶಪುರದಲ್ಲಿ ಚಿತ್ರೀಕರಣ ನಡೆದಿದೆ. ಸುಮಾರು 1 ಕೋಟಿ ರೂ.ಗಳ ಬಜೆಟ್‌ನ ಚಿತ್ರ ಇದಾ ಗಿದೆ. ಹೊಸಬರ ಪ್ರಯತ್ನಕ್ಕೆ ಕನ್ನಡಿಗರು ಸಾಥ್ ನೀಡುವಂತೆ ಅವರು ಕೇಳಿಕೊಂಡರು.

ತಂದೆಯನ್ನು ಮೀರಿ ಬೆಳೆಯುವಂತಹ ಆಸೆ ನನಗಿಲ್ಲ. ಆದರೆ ಅವರ ಹೆಸರನ್ನು ಉಳಿಸಿಕೊಂಡು ಹೋಗುವ ಆಸೆ ಇರುವುದಾಗಿ ಅವರು ಹೇಳಿದರು.

ಪಾಲಿಕೆ ಸದಸ್ಯ ಎ.ನಾಗರಾಜ್, ಮನು, ಗಣೇಶ್ ಚಿನ್ನಿಕಟ್ಟೆ, ಗಿರೀಶ್, ರಾಜು ಹುಲಿಕಟ್ಟೆ ಇತರರು ಈ ಸಂದರ್ಭದಲ್ಲಿದ್ದರು.

## ಗ್ಲಾಸ್ ಹೌಸ್ ಆವರಣದಲ್ಲಿ ಕೊಂಡಜ್ಜಿ ಬಸಪ್ಪ ಸ್ಮರಣೆ : ಚಿತ್ರಕಲೆ



ದಾವಣಗೆರೆ, ನ.17- ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆಯಿಂದ ನಗರದ ಗ್ಲಾಸ್ ಹೌಸ್ ಆವರ ಣದಲ್ಲಿ ಕೊಂಡಜ್ಜಿ ಬಸಪ್ಪನವರ 39ನೇ ಪುಣ್ಯಸ್ಮರಣೆ ಅಂಗವಾಗಿ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಕನ್ನಡ ರಾಜ್ಯೋತ್ಸವ ಹಾಗು ಪರಿಸರ ಕುರಿತು ಚಿತ್ರಗಳನ್ನು ಬಿಡಿಸಿದರು. ಸ್ಕೌಟ್ ಮಾಸ್ಟರ್ ಟಿ.ಎಂ.ರವೀಂದ್ರ ಸ್ವಾಮಿ, ಕೆ.ವಿ.ಸಿದ್ದೇಶ್ ಮತ್ತು ಮಕ್ಕಳು ಇದ್ದರು.

# ನಿವೃತ್ತಿಯ ನಂತರ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು

## ಹರಿಹರದ ಕಾರ್ಯಕ್ರಮದಲ್ಲಿ ಉಪನ್ಯಾಸಕ ಮಲ್ಲಿಕಾರ್ಜುನ್



ಹರಿಹರ, ನ.17- ನಿವೃತ್ತಿಯ ನಂತರ ಸಮಾಜ ಸೇವೆಯಲ್ಲಿ ಹೆಚ್ಚು ತೊಡಗಿಸಿಕೊಂಡು ಜೀವನ ಸಾರ್ಥಕ ಪಡಿಸಿಕೊಳ್ಳಿ ಎಂದು ಹರಪನಹಳ್ಳಿಯ ಕನ್ನಡ ಉಪನ್ಯಾಸಕ ಮಲ್ಲಿಕಾರ್ಜುನ ಹೇಳಿದರು.

ನಗರದ ನಿವೃತ್ತ ನೌಕರರ ಭವನದಲ್ಲಿ ಹರಪನಹಳ್ಳಿ ನವಜ್ಯೋತಿ ಸಾಂಸ್ಕೃತಿಕ ಸೇವಾ ಸಂಸ್ಥೆ ಮತ್ತು ಹರಿಹರ ಸ್ನೇಹಿತರ ಬಳಗದ ವತಿಯಿಂದ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರು ಹಾಗೂ ನಿವೃತ್ತ ಶಿಕ್ಷಕರಾದ ಎಸ್.ಹೆಚ್. ಹೂಗಾರ್ ಅವರಿಗೆ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ನಿವೃತ್ತಿಯ ನಂತರ ನಮ್ಮ ಜೀವನ ಮುಗಿಯಿತು ಎಂದು ನಿರಾಶರಾಗದೆ ಸಾಹಿತ್ಯ, ಸಂಗೀತ, ಕಲೆ ಹಾಗೂ ಸಮಾಜ ಸೇವೆಯ ಜೊತೆಗೆ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿ ಕ್ರಿಯಾಶೀಲರಾಗಿರುವವರಿಗೆ ಆರೋಗ್ಯ ಆಯಸ್ಸು ಹೆಚ್ಚಾಗಿರುತ್ತದೆ ಎಂದರು.

ಹೆಚ್.ಕೆ. ಕೊಟ್ರಪ್ಪ, ಸಾಹಿತಿ ಎಸ್.ಹೆಚ್. ಪಟೇಲ್, ಕ್ರೀಡಾಪಟು ನಿಜಗುಣ ಮಾತನಾಡಿದರು.

ಈ ಸಂದರ್ಭದಲ್ಲಿ ಡಿ.ಎಂ. ಮಂಜುನಾಥಯ್ಯ, ಗಣಪತ್ ಇನ್ನೋವೇಟಿವ್ ನ ವಿನಾಯಕ, ರೇವಣ್ಣ ನಾಯ್ಕ್, ಜಿಗಳಿ ಮಂಜುನಾಥ್, ಕಲೀಂ ಭಾಷಾ, ಎನ್.ಇ. ಸುರೇಶ್, ಈಶಪ್ಪ ಇನ್ನಿತರರು ಹಾಜರಿದ್ದರು.

## ಇ.ಡಿ. ನಿರ್ದೇಶಕರ ಅವಧಿ ವಿಸ್ತರಣೆ

ನವದೆಹಲಿ, ನ. 17 – ಕೇಂದ್ರ ಸರ್ಕಾರ ಜಾರಿ ನಿರ್ದೇಶನಾಲಯದ (ಇ.ಡಿ.) ನಿರ್ದೇಶಕ ಸಂಜಯ್ ಕುಮಾರ್ ಮಿಶ್ರ ಅವರ ಅವಧಿಯನ್ನು ಒಂದು ವರ್ಷ ವಿಸ್ತರಿಸಿದೆ. ಜಾರಿ ನಿರ್ದೇಶನಾಲಯ ಹಾಗೂ ಸಿಬಿಐ ನಿರ್ದೇಶಕರ ಅವಧಿಯನ್ನು ಈಗಿರುವ ಎರಡು ವರ್ಷಗಳಿಂದ 5 ವರ್ಷಗಳಿಗೆ ವಿಸ್ತರಿಸಲು ಕೇಂದ್ರ ಸರ್ಕಾರ ಇತ್ತೀಚೆಗಷ್ಟೇ ಸುಗ್ರೀವಾಜ್ಞೆ ಹೊರಡಿಸಿತ್ತು. ಕೇಂದ್ರ ಸರ್ಕಾರ ಈ ಹಿಂದೆಯೂ ಮಿಶ್ರ ಅವಧಿಯನ್ನು ವಿಸ್ತರಿಸಿತ್ತು. ಆ ಅವಧಿ ಗುರುವಾರಕ್ಕೆ ಅಂತ್ಯವಾಗಬೇಕಿತ್ತು.


**ದಾವಣಗೆರೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ.,**
ನಂ. 7-432, ಕುವೆಂಪು ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ-577002

**ಪ್ರಕಟಣೆ**

**84ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ಆಹ್ವಾನ ಪತ್ರಿಕೆ**

ಮಾನ್ಯ ಸಹಕಾರಿ ಸದಸ್ಯರೇ, ಮೇಲ್ಕಂಡ ನಮ್ಮ ಬ್ಯಾಂಕಿನ 2020-21ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ 18.11.2021ನೇ ಗುರುವಾರ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಶ್ರೀ ತರಳಬಾಳು ಸಭಾ ಭವನ ಹದಡಿ ರಸ್ತೆ, ದಾವಣಗೆರೆ-577005 ಇಲ್ಲಿ ನಡೆಸಲಾಗುತ್ತಿದ್ದು, ಜನಪ್ರತಿನಿಧಿಗಳನ್ನು ಹೊರತುಪಡಿಸಿ ಎಲ್ಲಾ ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.

**ವಿಶೇಷ ಸೂಚನೆ:** ಈಗಾಗಲೇ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದಿದ್ದ ಸದಸ್ಯರು ಇದನ್ನೇ ಆಹ್ವಾನವೆಂದು ಭಾವಿಸಿ ಸಭೆಗೆ ಹಾಜರಾಗಬೇಕಾಗಿ ವಿನಂತಿ.

ಆಡಳಿತ ಮಂಡಳಿ ಪರವಾಗಿ
**ಅಧ್ಯಕ್ಷರು**



**ಅಭಿನಂದನೆಗಳು**



ದಾವಣಗೆರೆ ನಾಮದೇವ ಶಿಂಪಿ ಸಮಾಜದ ಅಧ್ಯಕ್ಷರಾಗಿ ನೇಮಕವಾಗಿರುವ ಮಹೇಂದ್ರಕರ್ ಟೆಕ್ಸ್‌ಟೈಲ್ಸ್ ಮಾಲೀಕರಾದ
**ಎಂ.ಎಸ್. ವಿಠಲ್**
ಅವರಿಗೆ ಹೃದಯ ಪೂರ್ವಕ ಅಭಿನಂದನೆಗಳು.

ಶ್ರೀ ಶಂಕರ ಹ್ಯಾಂಡ್‌ಲ್ಯೂಂ ಕ್ಲಾತ್ ಹೌಸ್
ಶ್ರೀ ಶಂಕರ ಟೆಕ್ಸ್‌ಟೈಲ್ಸ್, ಶ್ರೀ ಶ್ರೀನಿವಾಸ ಟೆಕ್ಸ್‌ಟೈಲ್ಸ್
ಜೆ.ಪಿ.ಪರಶುರಾಮ್ ಮಹೇಂದ್ರಕರ್, ನವಲೆ ಶಂಕರ್ ರಾವ್


**IN THE COURT OF HON'BLE PRL. CIVIL JUDGE AT DAVANGERE.**

**Execution Petition No. 71/2019**

**Decree-Holder :** **Sri K.S. Krishnoji Rao., S/o Late Sri Sheshappa,** R/o Rajaji Nagar, Birur Town, Kadur Taluk, Chikkamagalur Dist.,

**Dead by his LR's :** **1a) Smt. Bhaghyalaxmi w/o Late K.S., Krishnoji Rao, 1a) Sri Vinay Kumar K. S/o Late K.S. Krishnoji Rao, 1a) Smt. Shruthi Keerthi., W/o Late K.S. Krishnoji Rao,**

All are residents of Birur Town, Kadur Taluk, Chikkamagalore Dist., **V/s**

**Judgement-Debtor :** 1) **Sri H.S. Jayappa, 2) Sri G.S. Rajappa.**

**Cause-Notice to the Judgement - Debtor's**

**Judgement-Debtors No. 1 and 2 :**

1) **Sri H.S. Jayappa,** S/o Late. Sri. Siddappa, Aged about 56 years, Lecturer in SJVP College, Harihara, R/o Spoorthy, Door No. 1249/15, ward No. 34, 2nd main, 8th cross, Near Maganur Basappa School, Taralabalu Extension, Near Vidya Nagar, Davangere City.

2) **Sri G.S. Rajappa,** S/o Sri. Shankarappa, aged about 61 years, Retd. Syndicate Bank Employee, R/o Door No. 1250/16, Ward No. 34, 2nd Main, 8th Cross, Near Maganur Basappa School, Taralabalu Extension, Near Vidya Nagar, Davangere City.

Whereas, the Decree-Holder has filed the above Execution petition for seeking the relief of Executing the Judgement and Decree in O.S. No. 446/1987 dated. 26.02.1994 and RA No. 25/2004 dated 03.09.2004 and RSA No. 1155/2004 dated. 15.06.2007 and other reliefs against the JDR No. 1 and 2.

The Cause Notice of the above execution petition was not served on the JDR No. 1 and 2, which was sent through court as well as RPAD. But both of you purposefully evaded the same. Hence, this advertisement in News paper.

Through this paper publication you are hereby called upon to attend the court on 23.12.2021 at 11.00 am by personally or duly authorized advocate to answer the above said execution petition. In default of your appearance on the day and time, the petition will be heard and determined in your absence.

Given under my hand and the seal of the court on this 16th of November.2021

**Advocates for Decree-Holder,**
**Timmalapurada Ravi Shankar,**
**Advocates, 9141419386, TAS**
**Law Associates, Davangere.**

**Sd/-**
**Chief Ministerial Officer**
**Civil Judge Court**
**Davangere.**

**ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ.**
#79/2, ಸಿಲ್ವರ್ ಜ್ಯುಬ್ಲಿ ಬಿಲ್ಡಿಂಗ್, ಈರುಳ್ಳಿ ಮಾರ್ಕೆಟ್ ಹತ್ತಿರ, ಪಿ.ಬಿ.ರಸ್ತೆ , ದಾವಣಗೆರೆ-577002

**ನಿಯಮ 8 (1) ಪರಿಶಿಷ್ಟ-IV**

**ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್:**

ಸೆಕ್ಯೂರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002 ರ ಅನ್ವಯ ಕೆಳ ಸಹಿದಾರರ ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ. ದಾವಣಗೆರೆ ಇದರ ಅಧಿಕಾರ ಹೊಂದಿದ ಅಧಿಕಾರಿಯಾಗಿದ್ದು ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002 ನಿಯಮ-3 ಮತ್ತು 9 ಓದಿಕೊಂಡಂತೆ ಕಲಂ 13 (12) ರನ್ವಯ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ, ಸಾಲಗಾರರಿಗೆ ಸಾಲವನ್ನು ಮರುಪಾವತಿಸಲು ದಿನಾಂಕ 25.09.2020 ರಂದು ತಗಾದೆ ನೋಟೀಸ್‌ಗಳನ್ನು ನೀಡಲಾಗಿತ್ತು. ಸದರಿ ಸೂಚನೆಗಳು ತಲುಪಿದ ದಿನಾಂಕದಿಂದ 60 ದಿವಸದೊಳಗೆ ಸೂಚನೆಯಲ್ಲಿ ಸೂಚಿರುವ ಮೊಬಲಗನ್ನು ಮರುಪಾವತಿ ಮಾಡಬೇಕಿತ್ತು . ಸಾಲಗಾರರು ಸಾಲದ ಮೊಬಲಗನ್ನು ಮರುಪಾವತಿ ಮಾಡಲಿಲ್ಲವಾದ್ದರಿಂದ, ಸಾಲಗಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ. ಸದರಿ ನಿಯಮದ ನಿಯಮ 8 ಮತ್ತು 9 ನ್ನು ಓದಿಕೊಂಡಂತೆ ಸದರಿ ಆಕ್ಟ್ ಪ್ರಕರಣ 13 (4) ರನ್ವಯ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ದಿನಾಂಕ 15.11.2021ರಂದು ಈ ಕೆಳಕಂಡ ಸೊತ್ತುಗಳನ್ನು ಕೆಳ ಸಹಿದಾರರು ಸಾಂಕೇತಿಕವಾಗಿ ವಶಪಡಿಸಿಕೊಂಡಿರುತ್ತಾರೆ. ನಿರ್ದಿಷ್ಟವಾದ ಸಾಲಗಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ, ಯಾರೂ ಸದರಿ ಸ್ವತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ವ್ಯವಹಾರ ನಡೆದಿದ್ದೇ ಆದರೆ, ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ. ದಾವಣಗೆರೆ ಇದರ ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಹಾಗೂ ಇತರೆ ಖರ್ಚುಗಳನ್ನು ಚುಕ್ತಾ ಮಾಡುವುದಕ್ಕೆ ಅದು ಒಳಪಟ್ಟಿರುತ್ತದೆ.

**ಸಾಲಗಾರ ಹೆಸರು ಮತ್ತು ವಿಳಾಸ: 1. ಶ್ರೀ ಎಂ. ರವಿಶಂಕರ್ ಬಿನ್ ಎಂ. ರಂಗನಾಥಂ,** ಡೋರ್ ನಂ.116/17, 10ನೇ ಕ್ರಾಸ್ ಕಿರುವಾಡಿ ಲೇಔಟ್, ಕಾವೇರಮ್ಮ ಶಾಲೆ ಹತ್ತಿರ, ಕೆ.ಬಿ. ಬಡಾವಣೆ, ದಾವಣಗೆರೆ. **ಸಾಲದ ಖಾತೆ ಸಂಖ್ಯೆ: ಎಸ್‌ಸಿಸಿ : 362/103** ದಿನಾಂಕ 31.10.2021ರಂದು ಬರಬೇಕಾದ ಒಟ್ಟು ಬಾಕಿ ರೂ 2,39,79,475.50 + ಈ ತಹಲ್‌ವರೆಗೆ ಬಡ್ಡಿ (ಎನ್‌ಪಿಎ ಆದ ದಿನಾಂಕ 15.07.2020 ತಗಾದೆ ಸೂಚನೆ ದಿನಾಂಕ 25.09.2020)

**2. ಶ್ರೀಮತಿ ಎಂ. ಕವಿತಾ ಶಂಕರ್ ಕೋಂ ಎಂ.ರವಿಶಂಕರ್,** ಡೋರ್ ನಂ.116/17, 10ನೇ ಕ್ರಾಸ್, ಕಿರುವಾಡಿ ಲೇಔಟ್, ಕಾವೇರಮ್ಮ ಶಾಲೆ ಹತ್ತಿರ, ಕೆ.ಬಿ. ಬಡಾವಣೆ, ದಾವಣಗೆರೆ. **ಸಾಲದ ಖಾತೆ ಸಂಖ್ಯೆ: ಎಂ.ಎಲ್. 261/103** ದಿನಾಂಕ 31.10.2021 ರಂದು ಬರಬೇಕಾದ ಒಟ್ಟು ಬಾಕಿ ರೂ. 3,07,59,486/ + ಈ ತಹಲ್‌ವರೆಗೆ ಬಡ್ಡಿ (ಎನ್‌ಪಿಎ ಆದ ದಿನಾಂಕ 07.06.2020 ತಗಾದೆ ಸೂಚನೆ ದಿನಾಂಕ 25.09.2020)

**ಜಾಮೀನುದಾರರುಗಳ ಹೆಸರು ಮತ್ತು ವಿಳಾಸ: 1. ಶ್ರೀ ಕೆ.ಎ. ಸಂತೋಷ್, ವಿಘ್ನೇಶ್ ಆಟೋ # 249/99,** ನಂದಿ ಪೆಟ್ರೋಲ್ ಬಂಕ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ. **2. ಶ್ರೀ ಎನ್.ಎಂ. ಸೋಮಯ್ಯ ಬಿನ್ ಎನ್.ಎನ್. ನಂದಯ್ಯ,** 3ನೇ ಮುಖ್ಯ ರಸ್ತೆ, 9ನೇ ತಿರುವು, ವಿನೋಬನಗರ, ದಾವಣಗೆರೆ

**ಅಡಮಾನ ಮಾಡಿರುವ ಆಸ್ತಿಯ ವಿವರ:** 1. ದಾವಣಗೆರೆ ನಗರದ 5ನೇ ವಾರ್ಡ್, 7ನೇ ಡಿವಿಜನ್, ಪೂನಾ-ಬೆಂಗಳೂರು ರಸ್ತೆ, ರಿಲೈಯನ್ಸ್ ಮಾರ್ಕೆಟ್ ಪಕ್ಕ, ಮಹಾನಗರ ಪಾಲಿಕೆಯ ಡೋರ್ ನಂ.73/1 ಮತ್ತು 2 ಇದರ ಅಳತೆ 15.5+17.5/2x252 ಅಡಿಗಳ ಪೈಕಿ, ದಕ್ಷಿಣ ಭಾಗದಲ್ಲಿ ಅಳತೆ ಪೂರ್ವ-ಪಶ್ಚಿಮ 17.5 ಅಡಿಗಳು ಉತ್ತರ-ದಕ್ಷಿಣ 60 ಅಡಿಗಳ ವಾಣಿಜ್ಯ ಸೊತ್ತು. ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ ; **ಚಂದ್ರಪ್ಪ ಇವರ ಸೊತ್ತು** ಪಶ್ಚಿಮಕ್ಕೆ: **ಕೆ.ಕೆ. ಶಿವಪ್ಪನವರ ಆಸ್ತಿ** ಉತ್ತರಕ್ಕೆ: **ಇದೇ ಆಸ್ತಿಯ ಉಳಿದ ಭಾಗ** ದಕ್ಷಿಣಕ್ಕೆ : **ಪೂನಾ-ಬೆಂಗಳೂರು ರಸ್ತೆ, ಈ ಮಧ್ಯದ ಸೊತ್ತು.**

2. ದಾವಣಗೆರೆ ನಗರದ 5ನೇ ವಾರ್ಡ್, 7ನೇ ಡಿವಿಜನ್, ಪೂನಾ-ಬೆಂಗಳೂರು ರಸ್ತೆ, ರಿಲೈಯನ್ಸ್ ಮಾರ್ಕೆಟ್ ಪಕ್ಕ, ಮಹಾನಗರ ಪಾಲಿಕೆಯ ಡೋರ್ ನಂ.73/1 ಮತ್ತು 2 ಇದರ ಅಳತೆ 15.5+17.5/2x252 ಅಡಿಗಳ ಪೈಕಿ, ಉತ್ತರ ಭಾಗದಲ್ಲಿ ಅಳತೆ ಪೂರ್ವ-ಪಶ್ಚಿಮ 15.5 ಅಡಿಗಳು ಉತ್ತರ-ದಕ್ಷಿಣ 192 ಅಡಿಗಳ ವಾಣಿಜ್ಯ ಸೊತ್ತು. ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ ; **ಅಂದನೂರು ಕೊಟ್ರಪ್ಪ ಇವರ ಆಸ್ತಿ** ಪಶ್ಚಿಮಕ್ಕೆ: **ಕೆ.ಕೆ. ಶಿವಪ್ಪನವರ ಆಸ್ತಿ** ಉತ್ತರಕ್ಕೆ: **ಅಂದನೂರು ಕೊಟ್ರಪ್ಪ ಮತ್ತ ಸಹೋದರರ ಆಸ್ತಿ** ದಕ್ಷಿಣಕ್ಕೆ :**ಸ್ಥಿರಾಸ್ತಿಯ ಉಳಿದ ಭಾಗ, ಈ ಮಧ್ಯದ ಸೊತ್ತು.**

ದಿನಾಂಕ : 15.11.2021
ಸ್ಥಳ: ದಾವಣಗೆರೆ

ಸಹಿ/-
**ಎಂ. ಶಿವಲಿಂಗಸ್ವಾಮಿ**
**ಅಧಿಕೃತ ಅಧಿಕಾರಿ ಹಾಗೂ ಪ್ರಧಾನ ವ್ಯವಸ್ಥಾಪಕರು**
ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ. ದಾವಣಗೆರೆ.

# ಜಗಳೂರು : ಕಡಲೆ ಬೆಳೆಗೆ ಕಾಯಿ ಕೊರಕದ ಬಾಧೆ



ಜಗಳೂರು, ನ.17- ಕಡಲೆ ಬೆಳೆಯು ಪ್ರಸಕ್ತ ಜಗಳೂರು ತಾಲ್ಲೂಕಿನಲ್ಲಿ ಬಿತ್ತನೆಯಿಂದ 25 ದಿವಸಗಳ ಬೆಳೆ ಇರುತ್ತದೆ. ಇತ್ತೀಚಿಗೆ ಮೂರು ನಾಲ್ಕು ದಿವಸಗಳಿಂದ ಮೋಡ ಕವಿದ ವಾತಾವರಣ ಇದ್ದು ಮುಖ್ಯವಾಗಿ ಕಾಯಿ ಕೊರಕ (ಹೆಲಿಕೋವರ್ಪಾ) ಹುಳುವಿನ ಬಾಧೆ ರೈತರ ಜಮೀನುಗಳಲ್ಲಿ ಕಂಡು ಬರುತ್ತಿದೆ.

ಕಡಲೆ ಬೆಳೆಯು ಹಿಂಗಾರು ಹಂಗಾಮಿನ ಒಂದು ಮುಖ್ಯವಾದ ಬೇಳೆಕಾಳು ಬೆಳೆಯಾಗಿದ್ದು, ಇದನ್ನು ಹೆಚ್ಚಾಗಿ ಮಳೆಯಾಶ್ರಿತ ಕಪ್ಪು ಮಣ್ಣಿನಲ್ಲಿ ಬೆಳೆಯಲಾಗುತ್ತದೆ.

ಸಾಮಾನ್ಯವಾಗಿ ಬೇರುಗಳಲ್ಲಿ ಸಣ್ಣ ಗಂಟುಗಳನ್ನು ಹೊಂದಿರುವುದೇ ಇದರ ವಿಶೇಷ ಗುಣ. ಇದು ಚಳಿಗಾಲದ ಹಿಂಗಾರಿ ಬೆಳೆ, ಇದರ ಉತ್ತಮ ಬೆಳವಣಿಗೆಗೆ ತಂಪಾದ ಹವಾಮಾನ ಅವಶ್ಯಕ. ಹೆಚ್ಚಿನ ಕಾಯಿ ಕಟ್ಟಲು ಉಷ್ಣತೆಯ ಅವಶ್ಯಕತೆ ಈ ಬೆಳೆಗೆ ಇದೆ. ಬಿತ್ತುವಾಗ ಅಥವಾ ಹೂ ಕಚ್ಚುವ ಸಮಯದಲ್ಲಿ ಹೆಚ್ಚಿನ ಮಳೆ ಬಂದರೆ ಈ ಬೆಳೆ ಹಾಳಾಗುತ್ತದೆ. ಇದಕ್ಕೆ ಅಧಿಕ ಮಳೆ ಅವಶ್ಯಕತೆ ಇಲ್ಲ.

ಹಿಂಗಾರು ಹಂಗಾಮಿನಲ್ಲಿ 7600 ಹೆಕ್ಟೇರ್ ಬಿತ್ತನೆ ಗುರಿ ಇದ್ದು, ಇದರಲ್ಲಿ ಮುಖ್ಯವಾಗಿ ಸುಮಾರು 5,500 ಹೆಕ್ಟೇರ್ ಪ್ರದೇಶದಲ್ಲಿ ಕಡಲೆ, 30 ಹೆಕ್ಟೇರ್ ಜೋಳ, ಮತ್ತು ರಾಗಿ 50 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಆಗುವ ಸಾಧ್ಯತೆ ಇದೆ. ಸಾಮಾನ್ಯವಾಗಿ ಕಡಲೆ ಬೆಳೆ ಗಿಡದಿಂದ ಹೊರ ಸೂಸುವ ಮ್ಯಾಲಿಕ್ ಆಮ್ಲ ಕೀಟಗಳ ಹಾವಳಿಯನ್ನು ತಡೆಗಟ್ಟುತ್ತದೆ. ಇದಲ್ಲದೆ ಕಡಲೆಯನ್ನು ಚಳಿಗಾಲದ ಕೊನೆಯಲ್ಲಿ ಬಿತ್ತುವುದರಿಂದ ಕೀಟಗಳ ಚಟುವಟಿಕೆ ಕಡಿಮೆ. ಆದರೂ ಕೆಲವು ಕೀಟಗಳು ಇದನ್ನು ಲೆಕ್ಕಿಸದೆ ಬೆಳೆ ಹಾನಿಯುಂಟುಮಾಡುತ್ತವೆ.

ಈ ಕೀಟವು ಪ್ರಾರಂಭಿಕ ಹಂತದಲ್ಲಿ ಎಲೆ ಹಸಿರು ಭಾಗವನ್ನು ಕೊರೆದು ತಿನ್ನುತ್ತದೆ. ನಂತರ ಮೊಗ್ಗು ಮತ್ತು ಕಾಯಿಗಳ ಮೇಲೆ ತಿನ್ನುತ್ತದೆ. ಹೆಣ್ಣು ಪತಂಗವು ತತ್ತಿಗಳನ್ನು ಎಲೆಗಳ ಮೇಲೆ ಇಡುತ್ತದೆ. ಬಳಿಕ ಹುಳುಗಳು ದೇಹದ ಅರ್ಧ ಭಾಗವನ್ನು ಕಾಯಿಯೊಳಗೆ ಹಾಕಿ ತಿನ್ನುವುದು ಸಾಮಾನ್ಯ. ಮೊಗ್ಗು ಮತ್ತು ಹೂಗಳನ್ನು ಕೊರೆಯುವುದರಿಂದ ಅವು ಉದುರಿ ಕಾಯಿ ಹಿಡಿಯುವುದು ಕಡಿಮೆಯಾಗುತ್ತದೆ. ಈ ಕೀಟವು ಸರಾಸರಿ ಶೇ 40-50% ಹಾನಿ ಮಾಡುತ್ತದೆ.

ಕಾಯಿ ಕೊರೆಯುವ ಹುಳುವಿನ ಹತೋಟಿಗಾಗಿ ಬೆಳೆ ಶೇ. 50 ರಷ್ಟು ಹೂ ಬಿಟ್ಟಾಗ ಮತ್ತು ಕಾಯಿ ಬಲಿಯುವ ಹಂತದಲ್ಲಿದ್ದಾಗ 10 ಗಿಡಗಳಲ್ಲಿ ಒಂದು ಕೀಟ ಕಂಡು ಬಂದರೂ ಕೀಟನಾಶಕವನ್ನು ಸಿಂಪಡಿಸಲು ಕೋರಿದೆ.

## ಕಬ್ಬೂರಿನಲ್ಲಿ ಇಂದು ಅಪ್ಪು ಪುಣ್ಯಾರಾಧನೆ

ದಾವಣಗೆರೆ ತಾಲ್ಲೂಕಿನ ಕಬ್ಬೂರು ಗ್ರಾಮದಲ್ಲಿ ಇಂದು ಸಂಜೆ 5 ಕ್ಕೆ ನಟ ಹಾಗೂ ಸಮಾಜ ಸೇವಕ ಪುನೀತ್ ರಾಜ್‌ಕುಮಾರ್ ಅವರ ಪುಣ್ಯಾರಾಧನೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅಪ್ಪು ಬಾಯ್ಸ್ ಅಭಿಮಾನಿ ಬಳಗದ ಮುಖಂಡ ಭರಮಪ್ಪ ಹೇಳಿದ್ದಾರೆ.

ಸಮಾಜಕ್ಕೆ ಮಾದರಿಯಾದ ಅಪ್ಪು ಭಾವಚಿತ್ರ ಮೆರವಣಿಗೆ ಮಾಡಲಿದ್ದು, ಸಾವಿರಾರು ಅಭಿಮಾನಿಗಳು ದೀಪ ಹಿಡಿದು ಭಾಗವಹಿಸಲಿದ್ದಾರೆ. ಇದೇ ಸಂದರ್ಭ ಅನ್ನ ಸಂತರ್ಪಣೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.

## ನಂದಗೋಕುಲ ಶಾಲೆಯಲ್ಲಿ ಸ್ಪರ್ಧೆ



ದಾವಣಗೆರೆ, ನ.17- ನಗರದ ದೇವರಾಜ ಅರಸು ಬಡಾವಣೆಯಲ್ಲಿರುವ ನಂದಗೋಕುಲ ಶಾಲೆಯಲ್ಲಿ ಮಕ್ಕಳ ದಿನಾಚರಣೆ ಪ್ರಯುಕ್ತ ಮಕ್ಕಳಿಗೆ ವೇಷ ಭೂಷಣ ಸ್ಪರ್ಧೆ ಏರ್ಪಡಿಸಲಾಗಿತ್ತು.

ಈ ಸಂದರ್ಭದಲ್ಲಿ ಲಯನ್ಸ್ ನೇಸರ ಕ್ಲಬ್ ಅಧ್ಯಕ್ಷರಾದ ಶ್ರೀಮತಿ ಶ್ರೀಲಕ್ಷ್ಮಿ ಸತೀಶ್, ಸದಸ್ಯರಾದ ರೇಣುಕಾರಾಧ್ಯ ಕುಮಾರ್, ಶಾಲೆಯ ಕಾರ್ಯದರ್ಶಿ ಶ್ರೀಮತಿ ಬಿ. ಅನುಸೂಯ ಮತ್ತು ಬೋಧಕ-ಬೋಧಕೇತರರು ಉಪಸ್ಥಿತರಿದ್ದರು.

## ಹರಿಹರದಲ್ಲಿ ಚಿತ್ರಕಲಾ ಪ್ರದರ್ಶನ



ಹರಿಹರ, ನ.17- ಶ್ರೀ ಗುರು ತಿಪ್ಪೇರುದ್ರಸ್ವಾಮಿ ಪ್ರೌಢಶಾಲೆಯಿಂದ ಏರ್ಪಡಿಸಿದ್ದ ಚಿತ್ರಕಲಾ ಸ್ಪರ್ಧೆ ಮತ್ತು ಪ್ರದರ್ಶನವನ್ನು ಮುಖ್ಯೋಪಾಧ್ಯಾಯ ಬಿ.ಬಿ. ರೇವಣ್ಣನಾಯ್ಕ ವೀಕ್ಷಿಸಿದರು. ಚಿತ್ರಕಲಾ ಶಿಕ್ಷಕ ಮುರುಘರಾಜೇಂದ್ರ ಎ.ಎಸ್. ಬಹುಮಾನ ವಿತರಣೆ ಮಾಡಿದರು. ನೇತ್ರ (ಪ್ರಥಮ), ನಾಶೀಹಬಾನು (ದ್ವಿತೀಯ) ಹಾಗೂ ಸಾನಿಯಾ ಎಂ. (ತೃತೀಯ) ವಿಜೇತರಾಗಿದ್ದಾರೆ.

## ಚಿಕ್ಕತೊಗಲೇರಿಯಲ್ಲಿ ಶಿಕ್ಷಕರಿಗೆ ಸನ್ಮಾನ



ದಾವಣಗೆರೆ, ನ.17- ತಾಲ್ಲೂಕಿನ ಚಿಕ್ಕತೊಗಲೇರಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಈ ಸಾಲಿನ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ ವಿಜೇತರಾದ ಶ್ರೀಮತಿ ಕಲ್ಪನ ಎಸ್.ಟಿ. ಇವರನ್ನು ಶಾಲಾ ವತಿಯಿಂದ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕ ಬಸವರಾಜ್ ಇ. ಹಾಗೂ ಶಾಲಾ ಸಿಬ್ಬಂದಿ ಹಾಜರಿದ್ದರು.

## ವೀಳ್ಯದೆಲೆ ಸಮಗ್ರ ಬೇಸಾಯ ಪ್ರಾತ್ಯಕ್ಷಿಕೆ




ಹರಿಹರ, ನ.17- ತಾಲ್ಲೂಕಿನ ರಾಮತೀರ್ಥ ಗ್ರಾಮದಲ್ಲಿ ವೀಳ್ಯದೆಲೆಯಲ್ಲಿ ಸಮಗ್ರ ಬೇಸಾಯ ಕ್ರಮಗಳ ಕುರಿತು ಮುಂಚೂಣಿ ಪ್ರಾತ್ಯಕ್ಷಿಕೆ ತರಬೇತಿ ಕಾರ್ಯಕ್ರಮದಡಿ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ವಿವಿಧ ಕ್ಷೇತ್ರಗಳಿಗೆ ಭೇಟಿ ನೀಡಿ, ಮಾಹಿತಿ ನೀಡಲಾಯಿತು.

ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ ಭೇಟಿ ನೀಡಿ, ಅತಿಯಾದ ಮಳೆಯಿಂದಾಗಿ ಹರಿಹರ ತಾಲ್ಲೂಕಿನ ಬಹಳಷ್ಟು ವೀಳ್ಯದೆಲೆ ತಾಕುಗಳಲ್ಲಿ ಮಣ್ಣಿನಲ್ಲಿ ತೇವಾಂಶ ಹೆಚ್ಚಾಗಿರುವ ಕಾರಣ, ಕೆಲವು ಗ್ರಾಮಗಳ ವೀಳ್ಯದೆಲೆ ತೋಟಗಳಲ್ಲಿ ಸೊರಗು ರೋಗದ ಬಾಧೆ ತೀವ್ರವಾಗಿದೆ ಎಂದು ಅಭಿಪ್ರಾಯ ಪಟ್ಟರು.

ಕೇಂದ್ರದ ಸಸ್ಯ ಸಂರಕ್ಷಣಾ ತಜ್ಞ ಡಾ. ಟಿ.ಜಿ. ಅವಿನಾಶ್ ಬೆಳೆಗಳಲ್ಲಿ ಸಸ್ಯಜನ್ಯ ಕೀಟನಾಶಕಗಳ ಬಳಕೆ, ಜೈವಿಕ ಗೊಬ್ಬರಗಳ ಬಳಕೆ ಕುರಿತು ಮಾಹಿತಿ ನೀಡಿದರು. ನಂತರ ತಾಲ್ಲೂಕಿನ ರಾಮತೀರ್ಥ, ಹೊಳೆಸಿರಿಗೆರೆ, ಕಡರನಾಯಕನಹಳ್ಳಿ ಗ್ರಾಮದ ವಿವಿಧ ಅಡಿಕೆ, ತೆಂಗು, ಹೂವಿನ ತಾಕುಗಳಿಗೆ ವಿಜ್ಞಾನಿಗಳ ತಂಡ ಭೇಟಿ ನೀಡಿ, ವೈಜ್ಞಾನಿಕ ಮಾಹಿತಿ ನೀಡಿದರು. ಕೇಂದ್ರದ ಗೃಹ ವಿಜ್ಞಾನಿ ಡಾ. ಸುಪ್ರಿಯಾ ಪಿ. ಪಾಟೀಲ್, ರೈತರಾದ ಕುಬೇರಗೌಡ, ರುದ್ರೇಶ್, ಮಂಜಣ್ಣ ಇನ್ನಿತರರು ಹಾಜರಿದ್ದರು.

## ಹರಪನಹಳ್ಳಿ : ಉಪ್ಪಾರ ಯುವ ಘಟಕದ ಅಧ್ಯಕ್ಷರಾಗಿ ಕೊಟ್ರೇಶ್



ಹರಪನಹಳ್ಳಿ, ನ.17- ಉಪ್ಪಾರ ಸಮಾಜ ಯುವ ಘಟಕದ ತಾಲ್ಲೂಕು ಅಧ್ಯಕ್ಷರಾಗಿ ಕಸವನಹಳ್ಳಿ ಕೆ. ಕೊಟ್ರೇಶ್ ಆಯ್ಕೆಯಾಗಿದ್ದಾರೆ. ಪಟ್ಟಣದ ಮೇಗಳ ಉಪ್ಪಾರಗೇರಿಯಲ್ಲಿರುವ ಉಪ್ಪಾರ ಸಮುದಾಯ ಭವನದಲ್ಲಿ ನಡೆದ ಆಯ್ಕೆ ಸಭೆಯಲ್ಲಿ ಕೊಟ್ರೇಶ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು ಎಂದು ಸಮಾಜದ ತಾಲ್ಲೂಕು ಅಧ್ಯಕ್ಷ ಹನುಮಂತಪ್ಪ ತಿಳಿಸಿದ್ದಾರೆ.

ಉಪ್ಪಾರ ಸಮಾಜದ ತಾಲ್ಲೂಕು ಉಪಾಧ್ಯಕ್ಷ ಬಣಕಾರ ಮಂಜಪ್ಪ, ಕಾರ್ಯದರ್ಶಿ ಗುಡಿ ನಾಗರಾಜ್, ಶಿರಗಾನಹಳ್ಳಿ ಪರಶುರಾಮಪ್ಪ, ವೈ.ಆರ್. ಬಸವರಾಜ ಉಪ್ಪಾರ್, ಶಿಂಗ್ರಿಹಳ್ಳಿ ಮರಿಯಪ್ಪ, ಮಾಡ್ಲಿಗೆರೆ ಪ್ರಕಾಶ್, ಮೆಡಿಕಲ್ ತಿಮ್ಮಣ್ಣ, ತಿಪ್ಪನಾಯಕನಹಳ್ಳಿ ಮಾರಪ್ಪ, ಮಹೇಶ್ ತಾಳೆದಹಳ್ಳಿ, ಹನುಮಂತ, ಡಿ. ಕೆಂಚಪ್ಪ, ವೈ. ವಿಜಯಕುಮಾರ್ ಶೃಂಗಾರತೋಟ, ಡಿ.ಗಿರಿರಾಜ್, ಉಪ್ಪಾರ ನೌಕರ ಸಂಘದ ಅಧ್ಯಕ್ಷ ರಮೇಶ್, ಗೌರವಾಧ್ಯಕ್ಷ ವೈ.ಕೆ. ಚನ್ನಬಸಪ್ಪ, ಶೃಂಗಾರತೋಟ, ಉಪಾಧ್ಯಕ್ಷ ಕೊಟ್ರೇಶ್ ಬಣಕಾರ್, ಯುವ ಮುಖಂಡರಾದ ಮಟ್ಟೆ ನಾಗರಾಜ್, ನಿಂಗರಾಜ್, ಎಂ. ಮೋಹನ್, ವೈ. ಮಲ್ಲಿಕಾರ್ಜುನ್, ವೈ. ಹನುಮಂತ, ನಿಂಗಪ್ಪ, ಪ್ರವೀಣ್ ತಲವಾಗಲು, ರಾಜಪ್ಪ, ಇನ್ನಿತರರಿದ್ದರು.

## ಹರಿಹರ: ಕೊಂಡಜ್ಜಿ ಬಸಪ್ಪನವರ ಸ್ಮರಣೆ



ಹರಿಹರ, ನ.17- ಗುರು ದ್ರೋಣಾಚಾರ್ಯ ಸಮ್ಮಾನ ಪುರಸ್ಕೃತ ನಿವೃತ್ತ ಚಿತ್ರಕಲಾ ಶಿಕ್ಷಕ ಡಾ. ಜಿ.ಜೆ. ಮೆಹಂದಳೆ ಅವರು ಕೊಂಡಜ್ಜಿ ಬಸಪ್ಪನವರ ಸ್ಮರಣಾರ್ಥ ಅವರ ಭಾವಚಿತ್ರ ರಚಿಸಿ, ಕೊಂಡಜ್ಜಿ ಬಸಪ್ಪನವರ ಸ್ಮರಣೆ ಮಾಡಿದರು.

ಧನ್ಯೋಸ್ಮಿ ಭರತ ಭೂಮಿ ಸಂಘಟನೆಯ ಸದಸ್ಯರೊಂದಿಗೆ ಬಸಪ್ಪನವರ 39ನೇ ಪುಣ್ಯತಿಥಿ ಅಂಗವಾಗಿ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಅವರು ಸ್ಕೌಟ್ಸ್ ಮತ್ತು ಗೈಡ್ಸ್‌ಗಾಗಿ ಸಲ್ಲಿಸಿರುವ ಸೇವೆಯನ್ನು ಸ್ಮರಿಸಲಾಯಿತು. ಧನ್ಯೋಸ್ಮಿ ಭರತಭೂಮಿ ಸಂಘಟನೆಯ ಅಧ್ಯಕ್ಷ ಚರಣ ಅಂಗಡಿ, ಪಂಚಾಯತ್ ಅಧ್ಯಕ್ಷ ಚೇತನ ಪೂಜಾರ್, ವಕೀಲ ವೀರೇಶ್ ಅಜ್ಜಣ್ಣನವರ್, ಬೀರೇಶ್ ಕೋಲ್ಕರ್, ಪರಮೇಶಪ್ಪ, ಹನುಮಂತಪ್ಪ, ಮಹೇಶ್ ಗೋಣೆಪ್ಪನವರ್, ರಾಜಮ್ಮ, ಕಾವ್ಯ, ಆಶಾ, ಮಿಥುನ್ ಕಟವಟೆ, ವಿಜಯ ಕೆ. ಬಾತಿ, ಗುರುಪ್ರಸಾದ್ ಅನ್ವೇರಿ, ಆರ್. ಹರೀಶ್, ಬಿ.ಸಿ. ಮಧು, ವಿಜಯ ಉದಗಟ್ಟಿ, ಸಿದ್ಧಾರ್ಥ ಯಡಿಯಾಪುರ್, ರಾಜಶೇಖರ್, ರಾಜು ರೆಡ್ಡಿ ಉಪಸ್ಥಿತರಿದ್ದರು.

## ಸ್ವಾಮಿ ನಾಥನ್ ಆಯೋಗದ ವರದಿ ಜಾರಿ ಕ್ರಮಕ್ಕೆ ಆಗ್ರಹ

### ನೀರ್ಥಡಿ ಗ್ರಾಮದ ಕಾರ್ಯಕ್ರಮದಲ್ಲಿ ರೈತ ಮುಖಂಡ ಹುಚ್ಚವ್ವನಹಳ್ಳಿ ಮಂಜುನಾಥ್



ದಾವಣಗೆರೆ, ನ.17- ಸ್ವಾಮಿ ನಾಥನ್ ಆಯೋಗದ ವರದಿ ಜಾರಿಗೆ ಕುರಿತು ಕೇಂದ್ರ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ಒತ್ತಾಯಿಸಿದರು.

ತಾಲ್ಲೂಕಿನ ನೀರ್ಥಡಿ ಗ್ರಾಮದಲ್ಲಿ ಸಂಘದ ಗ್ರಾಮ ಶಾಖೆ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ನೇತೃತ್ವದ ಸರ್ಕಾರ 2014 ರಲ್ಲಿ ಲೋಕಸಭಾ ಚುನಾವಣೆಗಿಂತ ಮುಂಚಿತವಾಗಿ ದೇಶದ ರೈತರಿಗೆ ಸರ್ಕಾರ ಸ್ವಾಮಿನಾಥನ್ ವರದಿ ಮತ್ತು ಲೋಕ್ ಪಾಲ್ ಮಸೂದೆ ಜಾರಿಗೆ ತರುತ್ತೇವೆ ಎಂದು ಭರವಸೆ ನೀಡಿತ್ತು. ಆದರೆ ಅಧಿಕಾರಕ್ಕೆ ಬಂದು ಎಂಟು ವರ್ಷ ವಾದರೂ ವರದಿ ಜಾರಿಗೆ ಆಸಕ್ತಿ ತೋರಿಲ್ಲ ಎಂದರು.

ಸ್ವಾಮಿ ನಾಥನ್ ವರದಿ ಜಾರಿಗೆ ತಂದಿದ್ದರೆ ರೈತರು ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಲೆ ಸಿಗುತಿತ್ತು. ಆದರೆ ಎ.ಪಿ.ಎಂ.ಸಿ ಕಾಯ್ದೆ ಬದಲಾವಣೆ ಮಾಡುವ ಮೂಲಕ ಕೇಂದ್ರ ಸರ್ಕಾರ ಖರೀದಿದಾರರಿಗೆ ಅನುಕೂಲ ಮಾಡಿಕೊಟ್ಟಿದೆ. ಇದರಿಂದ ರೈತರ ಬೆಳೆಗಳಿಗೆ ಉತ್ತಮ ಧಾರಣೆ ಸಿಗದಂತಾಗಿದೆ, ಇದರಿಂದ ಹೊರ ಬರಬೇಕಾದರೆ ರೈತರು ಸಂಘಟಿತರಾಗಿ 'ಕನಿಷ್ಠ ಬೆಂಬಲ ಬೆಲೆ' ಕಾಯ್ದೆಯನ್ನು ಮಾಡಿ ಎಂದು ಹೋರಾಟ ಮಾಡಬೇಕು ಎಂದು ಹೇಳಿದರು. ಸಮಾರಂಭದ ಅಧ್ಯಕ್ಷತೆಯನ್ನು ರೈತ ಸಂಘದ ತಾಲ್ಲೂಕು ಅಧ್ಯಕ್ಷ ತಿಪ್ಪೇಶ್ ವಹಿಸಿದ್ದರು.

ಗುಮ್ಮನೂರು ಬಸವರಾಜ್, ಕೆಂಚಮ್ಮನಹಳ್ಳಿ ಹನುಮಂತಪ್ಪ, ತುಂಬಿಗೆರೆ ನಾಗರಾಜ್, ನೀರ್ಥಡಿ ತಿಪ್ಪೇಶ್, ಹುಚ್ಚವ್ವನಹಳ್ಳಿ ಪ್ರಕಾಶ್, ಊರಿನ ಮುಖಂಡರು, ಪಂಚಾಯ್ತಿ ಸದಸ್ಯರುಗಳು ಇನ್ನೂ ಹಲವಾರು ರೈತ ಮುಖಂಡರುಗಳು ಭಾಗವಹಿಸಿದ್ದರು.

## ವಿಧಾನಸಭೆ ಚುನಾವಣೆ : ನಗರದಲ್ಲಿಂದು ಜನ ಸ್ವರಾಜ್ ಸಮಾವೇಶ

ವಿಧಾನ ಪರಿಷತ್ತಿನ ಚುನಾವಣೆ ನಿಮಿತ್ತ ಶ್ರೀ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಮುದಾಯ ಭವನದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಜನ ಸ್ವರಾಜ್ ಕಾರ್ಯಕ್ರಮ ನಡೆಯಲಿದೆ.

ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಕೇಂದ್ರ ಸಚಿವ ಎ. ನಾರಾಯಣ ಸ್ವಾಮಿ, ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥ್ ನಾರಾಯಣ, ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್, ಅಬಕಾರಿ ಸಚಿವ ಗೋಪಾಲಯ್ಯ, ಲೋಕಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರ, ರಾಜ್ಯ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ, ರಾಜೇಂದ್ರ ಉಪಸ್ಥಿತರಿರುವರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ್ ಟೆಂಗಿನಕಾಯಿ, ರಾಜ್ಯ ಕಾರ್ಯದರ್ಶಿ ಮುನಿರಾಜು ಗೌಡ, ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಶಾಸಕರಾದ ಎಸ್.ಎ. ರವೀಂದ್ರನಾಥ್, ಎಂ.ಪಿ. ರೇಣುಕಾಚಾರ್ಯ, ಮಾಡಾಳ್ ವಿರುಪಾಕ್ಷಪ್ಪ, ಎಸ್.ವಿ. ರಾಮಚಂದ್ರಪ್ಪ, ಪ್ರೊ. ಲಿಂಗಣ್ಣ, ಮಾಜಿ ಶಾಸಕರು, ಜಿಲ್ಲೆಯ ಮುಖಂಡರು, ಚುನಾಯಿತ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್ ತಿಳಿಸಿದ್ದಾರೆ.

## 24 ರಿಂದ ಹರಿಹರದಲ್ಲಿ ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿ



ಮಲೇಬೆನ್ನೂರು, ನ.17- 534ನೇ ಶ್ರೀ ಕನಕ ಜಯಂತ್ಯೋತ್ಸವದ ಅಂಗವಾಗಿ ರಾಜ್ಯ ಕುಸ್ತಿ ಸಂಘ ಮತ್ತು ಶ್ರೀ ಹರಿಹರ ಕುಸ್ತಿ ಜೀರ್ಣೋದ್ಧಾರ ಸಮಿತಿ ಇವರ ಜಂಟಿ ಆಶ್ರಯದಲ್ಲಿ ಹರಿಹರದ ಗಾಂಧಿ ಮೈದಾನದಲ್ಲಿ ಇದೇ ದಿನಾಂಕ 24 ರಿಂದ 26 ರವರೆಗೆ ರಾಜ್ಯ ಮಟ್ಟದ ಹೊನಲು ಬೆಳಕಿನ ಕುಸ್ತಿ ಪಂದ್ಯಾವಳಿಯನ್ನು ಹಮ್ಮಿಕೊಂಡಿದ್ದು, ಇದರ ಕರಪತ್ರಗಳನ್ನು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಬೆಳ್ಳೂಡಿ ಶಾಖಾ ಮಠದಲ್ಲಿ ಬಿಡುಗಡೆಗೊಳಿಸಿದರು. ಪಂದ್ಯಾವಳಿ ಆಯೋಜಕರಾದ ನಂದಿಗಾವಿ ಶ್ರೀನಿವಾಸ್, ರೇವಣಪ್ಪ ಡಿಬಿಆರ್, ಸ್ಟಾರ್ ಈರಣ್ಣ, ಕೋಚರ್ ವಿನೋದ್, ಕರೇಕಟ್ಟೆ ಲೋಕೇಶ್, ಚೂರಿ ಜಗದೀಶ್, ಮಾರುತಿ ಪೂಜಾರ್, ವೈ. ಶಿವು , ದಾವಣಗೆರೆ ಪರಶುರಾಮ ಇನ್ನಿತರರಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ನಿಜಲಿಂಗಪ್ಪ ಬಡಾವಣೆ, ಎಸ್‌ಎಸ್ ಲೇಔಟ್ ಎ ಬ್ಲಾಕ್, ಲಕ್ಷ್ಮಿ ಫ್ಲೋರ್ ಮಿಲ್, ಗಂಗೂಬಾಯಿ ಹಾನಗಲ್ ಪಾರ್ಕ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

**ಬಾಡಿಗೆಗೆ ಬೇಕಾಗಿದೆ**
ಖಾಲಿ ಜಾಗ ಭೂ ಬಾಡಿಗೆ ಪ್ರಕಾರ ಹೋಟೆಲ್ ನಡೆಸಲು ಸ್ಥಳಾವಕಾಶ ಬೇಕಾಗಿದೆ.
78995 94599

**ಮಾರಾಟಕ್ಕೆ**
ಕುವೆಂಪು ನಗರ ಸೈಟ್ (ಕಾರ್ನರ್) 40×50, ಶಕ್ತಿನಗರ ಸೈಟ್ (ಉತ್ತರ) 30×45, ವಿನಾಯಕ ಬಡಾವಣೆ ಸೈಟ್ (ದಕ್ಷಿಣ) 30×40, ಸಿದ್ದವೀರಪ್ಪ ಬಡಾವಣೆ ಸೈಟ್ (ಪಶ್ಚಿಮ) 48×50, ಉತ್ತಮ ಚಂದ್ ಬಡಾವಣೆ ಸೈಟ್ (ಉತ್ತರ) 35×64
78996 36597, 99165 25828

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಲೇಔಟ್, ಬನಶಂಕರಿ ಬಡಾವಣೆ, ರಂಗನಾಥ ಬಡಾವಣೆ, ಜಯನಗರ, ಜೆ.ಹೆಚ್. ಪಟೇಲ್ ಬಡಾವಣೆ ಹಾಗೂ ದಾವಣಗೆರೆಯಾದ್ಯಂತ ಸೈಟುಗಳು ಮಾರಾಟಕ್ಕಿವೆ. ಕಮರ್ಷಿಯಲ್ ಮತ್ತು ಮನೆಗಳು, ಹೊಲ ಮಾರಾಟಕ್ಕಿವೆ.
97315 12365

**ಬೇಕಾಗಿದ್ದಾರೆ**
ಆಫೀಸ್ ಬಾಯ್ ಕೆಲಸಕ್ಕೆ ಸ್ವಂತ ಸೈಕಲ್‌ವುಳ್ಳ ಸ್ಥಳೀಯ ಯುವಕರು ಬೇಕಾಗಿದ್ದಾರೆ.
ಅಂದನೂರು ಚಿಟ್ಸ್ (ರಿ)
ರಾಂ & ಕೋ ಸರ್ಕಲ್, ದಾವಣಗೆರೆ

**ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆ ನಗರದಲ್ಲಿ ಕೆಲಸ ನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್, ಸೆಕ್ಯೂರಿಟಿ ಸೂಪರ್ ವೈಜರ್ ಬೇಕಾಗಿದ್ದಾರೆ. ಇ.ಎಸ್.ಐ, ಪಿ. ಎಫ್, ವೇತನ ನೀಡಲಾಗುವುದು
ಸಂಪರ್ಕಿಸಿ:
63606 00469

ದೇಹದ ತೂಕ ಹೆಚ್ಚಿಸಿಕೊಳ್ಳಿ ಅಥವಾ ತೂಕ ಕಡಿಮೆ ಮಾಡಿಕೊಳ್ಳಿ
100% ವೈಜ್ಞಾನಿಕ ಹಾಗೂ ಸುರಕ್ಷಿತ
GAIN WEIGHT OR LOSE WEIGHT
Contact: 96323 23213

**ಕ್ರಯ ಪತ್ರ ಕಳೆದಿದೆ**
ದಿನಾಂಕ: 5.11.2020 ರಂದು ದಾವಣಗೆರೆಯ ವಿನಾಯಕ ಬಡಾವಣೆ ವಾಸದ ಮನೆ ಸಮಾರಂಭದಲ್ಲಿ ಕಾಮೇಶ್ವರ ರಾವ್ ಬಿನ್ ಎ.ಟಿ.ಕೊಂಡಯ್ಯ ಅವರ ಬಾಬ್ತು ಹರಿಹರ ತಾ|| ಹನಗವಾಡಿ ಗ್ರಾಮದ ಡೋರ್ ನಂ. 545, ಸೈಟ್ ನಂ.24ರ 48×50 ಅಡಿಯುಳ್ಳ ಖಾಲಿ ನಿವೇಶನದ ಕ್ರಯ ಪತ್ರ ಆಕಸ್ಮಿಕವಾಗಿ ಕಳೆದು ಹೋಗಿರುತ್ತದೆ. ಸಿಕ್ಕಿದ್ದಲ್ಲಿ ಸಂಪರ್ಕಿಸಿ:
94807 96249

**JOB OFFER**
Post : Assistant / Labour.
Work Environment: Warehouse @ Davangere. Salary : 10000 to 14000, ESI, EPF, BONUS, GRATUITY Available
Education: SSLC, PUC with English Reading Knowledge Experience : 0 to 1yr. (FMCG or Warehouse Operaitons) Should be Flexible with Timing
98865 78122

**ಬೇಕಾಗಿದ್ದಾರೆ**
ಗಿಫ್ಟ್ ಶಾಪ್‌ನಲ್ಲಿ ಕೆಲಸ ಮಾಡಲು ಸೇಲ್ಸ್ ಬಾಯ್ಸ್ ಅಥವಾ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ರುಚಿ ಕಲೆಕ್ಷನ್ ಮಂಡಿಪೇಟೆ, ದಾವಣಗೆರೆ.
9845456818, 9964526424

**ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆ, ಹರಿಹರ, ರಾಣೇಬೆನ್ನೂರುನಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಮತ್ತು ಲೇಬರ್ಸ್ ಬೇಕಾಗಿದ್ದಾರೆ.
ವಿಳಾಸ: ಸಫಾಜ್ ಸೆಕ್ಯೂರಿಟಿ ಸರ್ವೀಸ್, ಎಸ್.ಎನ್.ಎ, ಪ್ಲಾಜಾ, ವಿನೋಬನಗರ ಪಿ.ಬಿ. ರಸ್ತೆ, ದಾವಣಗೆರೆ.
91130 53483, 08192-296709

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಏಜೆನ್ಸಿಯಲ್ಲಿ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ ಪದವೀಧರರಿಗೆ ಮೊದಲ ಆದ್ಯತೆ ಹಾಗೂ ಕಂಪ್ಯೂಟರ್ ಜ್ಞಾನ ಹೊಂದಿರಬೇಕು.
97437 21300
94817 21300

**ಸುವರ್ಣ ಅವಕಾಶ**
ಮನೆಯಲ್ಲೇ ಕುಳಿತು, ಕೈ ಬರವಣಿಗೆ ಕೆಲಸ ಮಾಡಿ, ತಿಂಗಳಿಗೆ 7000 ರಿಂದ 14000 ಸಾವಿರದವರೆಗೆ ಸಂಪಾದಿಸಿ. ಸಂಪರ್ಕಿಸಿ :
88844 63076

**COMMERCIAL SITE FOR SALE**
Corner commercial site for sale, B.I.E.T. College Road, Opposite to Hemavathi Hostel, Contact
97424 34049

**ಬಾಡಿಗೆಗೆ ಇದೆ**
31x55 ಅಡಿ ಅಳತೆವುಳ್ಳ ಹೋಂ ಇಂಡಸ್ಟ್ರೀಸ್ ಬಾಡಿಗೆಗೆ ಇದೆ ಹಾಗೂ 10 HP ಕರೆಂಟ್ ಹಾಗೂ ಬೋರ್ ವೆಲ್ ಸೌಲಭ್ಯವಿದೆ.
ವಿಳಾಸ: ಹನಗವಾಡಿ ಇಂಡಸ್ಟ್ರೀಯಲ್ ಏರಿಯಾ, ಪ್ರಜಾವಾಣಿ ಪ್ರಿಂಟಿಂಗ್ ಪ್ರೆಸ್ ಪಕ್ಕ, ಹರಿಹರ.
98445 46777

**WANTED**
Sales Executives (3 yrs)
Manager (5 yrs) (car)
Telecalling (F) (car)
Java-API Developer
SFDC Developer
98444 92888

**ಕೆಲಸಕ್ಕೆ ಬೇಕಾಗಿದ್ದಾರೆ**
S.R.Construction ಆಫೀಸ್ ಕೆಲಸಕ್ಕೆ ಅನುಭವವುಳ್ಳವರು (Experience) Accountant Computer ಹಾಗೂ ಹಿಂದಿ ಮಾತನಾಡಬಲ್ಲವರು ಬೇಕಾಗಿದ್ದಾರೆ. ಪುರುಷರಿಗೆ ಮಾತ್ರ. ವಿಳಾಸ :
# 501, 230, S A Ravindranath Nagar Industrial Area, Lokikere Road, Near Choudeshwari Temple, Davanagere
88849 46322, 76769 99991

**ನೇರ ಪರೀಕ್ಷೆಗಳು**
SSLC- 7,8,9/10 ಪಾಸ್ /ಫೇಲ್. PUC- Science, Arts, Com. NTC- ನರ್ಸರಿ ಟೀಚರ್ಸ್ ಟ್ರೈನಿಂಗ್ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಪಿಯುಸಿ ಆದ ಯುವಕರು ಬೇಕಾಗಿದ್ದಾರೆ. ವೇತನ 7,500
ಸಂಪರ್ಕಿಸಿ: ಶ್ರೀ ಗಂಗೋತ್ರಿ ಎಜು ಟ್ರಸ್ಟ್ ಲಾಯರ್ ರೋಡ್, ದಾವಣಗೆರೆ.
86602 35013

**ಬೇಕಾಗಿದ್ದಾರೆ**
ಶಾಖಾ ವ್ಯವಸ್ಥಾಪಕರು-1 (B.A or B.Com), ಅಕೌಂಟೆಂಟ್- 1, ಸಹಾಯಕರು- 2 (ಮಹಿಳೆಯರಿಗೆ ಹೆಚ್ಚಿನ ಆದ್ಯತೆ)
ಶ್ರೀ ಸಾಯಿ ಕ್ರೆಡಿಟ್ ಕೋ-ಆಪ್ ಸೊಸೈಟಿ.ಲಿ, ಹರಿಹರೇಶ್ವರ ಟೆಂಪಲ್ ರಸ್ತೆ, ವಾಸವಿ ದೇವಸ್ಥಾನ ಪಕ್ಕ, ಹರಿಹರ.
99802 40407

**JOB OPPORTUNITY**
We need a Tally Faculty (Female)
Any Graduate with 0-2 years. can send their CV within 20-11-21 to hardsoftdvg@gmail.com or call us: 97312 18567

**ಮನೆ ಬಾಡಿಗೆಗೆ ಇದೆ**
Real Estate Agent
3 BHK, Shivakumar Swamy Badavane
3 BHK, Shivakumar Swamy Badavane
2 BHK, Shivakumar Swamy Badavane
3 BHK Vidyanagar,
2 BHK Nijalingappa Layout,
1 BHK Vidyanagar,
78927 93994

**FOR RENT**
Office Space Available for Rent - 1000 sq ft, 1st Floor. P.J.Extension, 9th Main, Davangere
98808 48628

**ಅಣಬೆಗಳು ದೊರೆಯುತ್ತವೆ**
ಡಿ.ಸಿ.ಎಂ. ಟೌನ್ ಶಿಪ್‌ನಲ್ಲಿ ಅಣಬೆಗಳು ದೊರೆಯುತ್ತವೆ.
ಸಂಪರ್ಕಿಸಿ
08192 255433

**ಬಾಡಿಗೆಗೆ / ಲೀಸ್‌ಗೆ**
2 ಬೆಡ್‌ರೂಂ, ಅಟ್ಯಾಚ್ ಬಾತ್‌ರೂಂವುಳ್ಳ 4 ಮನೆಗಳು ಕುಂದುವಾಡ ಕೆರೆ ಹತ್ತಿರ ಮಹಾಲಕ್ಷ್ಮಿ ಲೇಔಟ್‌ನಲ್ಲಿ ಲಭ್ಯವಿರುತ್ತವೆ.
(ಸಂಗಮ್ ಅಪಾರ್ಟ್‌ಮೆಂಟ್‌ನಲ್ಲಿ)
96388 17967
73380 43912

**ಮನೆ ಬಾಡಿಗೆ / ಲೀಸ್‌ಗೆ ಇದೆ**
ಡಬಲ್ ಬೆಡ್ ರೂಂ ಮನೆ ಬಾಡಿಗೆಗೆ ಮತ್ತು ಲೀಸ್‌ಗೆ ಖಾಲಿ ಇದೆ.
ಎಸ್. ಎಸ್. ಹೈಟೆಕ್ ಲೇಔಟ್, ಹೈಟೆಕ್ ಹಾಸ್ಪಿಟಲ್ ಎದುರು, ಧರ್ಮಸ್ಥಳ ಬಿಲ್ಡಿಂಗ್ ಹತ್ತಿರ, ದಾವಣಗೆರೆ
94497 72655

**ತಕ್ಷಣ ಬೇಕಾಗಿದ್ದಾರೆ**
ನಮ್ಮ ಹೋಟೆಲ್ ಪೂಜಾ ಇಂಟರ್‌ನ್ಯಾಷಲ್ ದಾವಣಗೆರೆಯಲ್ಲಿ Electrician ಬೇಕಾಗಿದ್ದಾರೆ. ಅನುಭವ ಇದ್ದವರಿಗೆ ಆದ್ಯತೆ ಕೊಡಲಾಗುವುದು. ಸಂಪರ್ಕಿಸಿ
99029 35937
96060 96698

**House For Rent Long Term & Short Term Available**
With all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**WANTED**
TELE CALLERS
We are looking for qualified Women for Tele Calling Hindi / English Language Compulsory (any PUC or Degree)
SM Wealth Solutions : Kondajji Road, Vijayanagara, Davangere
84316 62686

**ಓಂ ಶ್ರೀ ದತ್ತಾತ್ರೇಯ ಜ್ಯೋತಿಷಯಾಲಯ**
ಪಂ.ಶ್ರೀರಾಮ್ ಭಟ್
ಜ್ಯೋತಿಷ್ಯ ಶಾಸ್ತ್ರ ನಮ್ಮ ಪೂರ್ವಿಕರು ನಮಗೆ ಕೊಟ್ಟಂತ ಅವರ ನಿಮ್ಮ ಒಂದು ದಿವ್ಯ ಕರೆ ನಿಮ್ಮ ಜೀವನ ಬದಲಾಯಿಸುತ್ತದೆ. ಸಕಲ ಇಷ್ಟಾರ್ಥ ಸಿದ್ದಿಗಾಗಿ ಇಂದೇ ಕರೆ ಮಾಡಿ. ನಿಮ್ಮ ಯಾವುದೇ ಗುಪ್ತ ವಿಚಾರಗಳನ್ನು ಗುಪ್ತವಾಗಿ ಇಡಲಾಗುವುದು. ಕೇರಳ ಮತ್ತು ಕೊಳ್ಳೆಗಾಲದಿಂದ ನೇರ ಪರಿಹಾರ.
98862 30791

**ಶಿಕ್ಷಕಿಯರು ಬೇಕಾಗಿದ್ದಾರೆ**
NTC, D.Ed ಆಗಿರುವ ಶಿಕ್ಷಕಿಯರು ಬೇಕಾಗಿದ್ದಾರೆ.
S.V.G.H. PUBLIC SCHOOL
P.D.B. ಲೇಔಟ್, ಅಮರಾವತಿ, ಹರಿಹರ.
ಮೊ. 88805 55259

**ಸೈಟ್‌ಗಳು ಮಾರಾಟಕ್ಕಿವೆ**
2 ಸೈಟ್‌ಗಳು ಮಾರಾಟಕ್ಕಿವೆ.
ಅಳತೆ: 30x60 ಎಂ.ಬಿ. ಸಿಟಿ ಪಕ್ಕದಲ್ಲಿ, ಹೌಸಿಂಗ್ ಬೋರ್ಡ್ ಎದುರು
97430 73102

**ರೂಂ ಬಾಡಿಗೆಗಿದೆ**
ಟೀಚರ್ಸ್ ಮತ್ತು ಸ್ಟೂಡೆಂಟ್ಸ್ ವಿದ್ಯಾನಗರ ಪಾರ್ಕ್ ಹತ್ತಿರ ರೂಂ ಬಾಡಿಗೆಗೆ ಇದೆ.
ಸಂಪರ್ಕಿಸಿ
94480 47581

**ಬೇಕಾಗಿದ್ದಾರೆ**
ದಂತ ಆರೋಗ್ಯ ಚಿಕಿತ್ಸಾ ಕೇಂದ್ರದಲ್ಲಿ ಕೆಲಸ ಮಾಡಲು ಹೆಣ್ಣು ಮಕ್ಕಳು ಬೇಕಾಗಿದ್ದಾರೆ. ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ ಅಥವಾ ಪಿ.ಯು.ಸಿ ಗಿಂತ ಮೇಲ್ಪಟ್ಟಿರಬೇಕು. ಆಸಕ್ತಿಯುಳ್ಳವರು ಈ ಕೆಳಕಂಡ ವಿಳಾಸದಲ್ಲಿ ವಿಚಾರಿಸತಕ್ಕದ್ದು.
ಡಾ. ಕೆ. ಆರ್. ಶಿವಣ್ಣ, # 424, 4ನೇ ಮೇನ್, 8ನೇ ಕ್ರಾಸ್, ಬ್ಯಾಡಗಿ ಶೆಟ್ಟರ್ ಸ್ಕೂಲ್ ಎದುರು ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577 002.
94481 10488

**AVOID MOSQUITOES**
Mosquito Net for Doors and windowsh, MDF Design Boards available.
SRI GOWRI ENTERPRISES
# 7C2, 4th Cross, Karur Industrial Area, Near D.C Office, P.B Road, Davangere.
72049 94628

**ಬೇಕಾಗಿದ್ದಾರೆ**
ಪ್ರಖ್ಯಾತ ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವಿರುವ ಪುರುಷರು ಬೇಕಾಗಿದ್ದಾರೆ.
99649 32113
88808 89524

**ಸುಸಜ್ಜಿತ ಮನೆ ಮಾರಾಟಕ್ಕಿದೆ**
ದಾವಣಗೆರೆ ಪಿ.ಬಿ. ರಸ್ತೆ, ಪೂಜಾ ಹೋಟೆಲ್ ಎದುರಿಗೆ, ರಿಲಾಯನ್ಸ್ ಡಿಜಿಟಲ್ ಪಕ್ಕ, ಹೊಸದಾಗಿ ಕಟ್ಟಿದ RCC 40x15 ಸೈಜಿನ ಗ್ರೌಂಡ್ ಫ್ಲೋರ್, ಸಿಂಗಲ್ ಬೆಡ್ ರೂಂ ಮನೆ ಹಾಗೂ 1ನೇ ಮಹಡಿ ಕಟ್ಟಡ ಮಾರಾಟಕ್ಕಿದೆ.
73380 32713

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ – ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಭೂಮಿಕಾ ಮ್ಯಾಟ್ರಿಮೋನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near Coffee day, Nutana College Road, Vidyanagara, 2nd Main, Davangere
77603 16576
90080 55813

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
SSLC, PUC Technical & Non Tecnical Courses Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
87490 24789, 82173 02649

**ತಕ್ಷಣ ಬೇಕಾಗಿದ್ದಾರೆ**
ನಮ್ಮ ಹೋಟೆಲ್ ಪೂಜಾ ಇಂಟರ್‌ನ್ಯಾಷಲ್ ದಾವಣಗೆರೆಯಲ್ಲಿ Electrician ಬೇಕಾಗಿದ್ದಾರೆ. ಅನುಭವ ಇದ್ದವರಿಗೆ ಆದ್ಯತೆ ಕೊಡಲಾಗುವುದು. ಸಂಪರ್ಕಿಸಿ
99029 35937
96060 96698

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**LKG, UKG**
Play Group
Admision open
Pay Monthly Fee
Ram & Co circle & Kuvempu Nagara.
93802 29199

**WANTED LADY TEACHERS**
BA B.Ed, B.Sc B.Ed, D.Ed & NTC, Clerk Post: B.Com with Computer Knowledge. Preference will be given to experienced candidates.
Contact: VINAYAKA CONVENT, Kalikadevi Road DVG.
95356 10817

**ಶಿಕ್ಷಕಿಯರು ಬೇಕಾಗಿದ್ದಾರೆ**
- ಬಿ.ಎ ಮತ್ತು ಎಂ.ಎ, ಬಿ.ಎಡ್ (ಇತಿಹಾಸ),
- ಬಿ.ಎಸ್ಸಿ , ಬಿ.ಎಡ್,
- ವಾಚ್‌ಮ್ಯಾನ್ ಕುಟುಂಬಸ್ಥರು (ವಯಸ್ಸು 50 ವರ್ಷ), ಆಯಾ 5 ಜನರಿಗೆ (ಮಾತ್ರ)

ಕೊನೆಯ ದಿನಾಂಕ: 24-11-2021
ಸೇಂಟ್ ಮೇರಿಸ್ ಶಾಲೆ
(ಆಂಗ್ಲ ಮಾಧ್ಯಮ) Teachers we want to Fluency Experiance
ವಿನೋಬನಗರ, ದಾವಣಗೆರೆ.
ಮೊ. 94819 09493, 94497 02778

## ಸ್ಕೌಟ್ಸ್ - ಗೈಡ್ಸ್ ಸಿದ್ಧಗಂಗಾ ಸ್ಥಳೀಯ ಸಂಸ್ಥೆಯಲ್ಲಿ ರಾಜ್ಯ ಪುರಸ್ಕಾರ ಪ್ರದಾನ



ದಾವಣಗೆರೆ, ನ. 17- ನಗರದ ಶ್ರೀ ಸಿದ್ಧಗಂಗಾ ಸಂಸ್ಥೆಯಿಂದ ಈಚೆಗೆ 55 ಕಬ್ಸ್, 53 ಬುಲ್ಸ್, 23 ಸ್ಕೌಟ್ಸ್, 19 ಗೈಡ್ಸ್ ಮಕ್ಕಳಿಗೆ 2020ರ ಸಾಲಿನ ರಾಜ್ಯ ಪುರಸ್ಕಾರದ ಗೌರ್ನರ್ ಅವಾರ್ಡ್ ಪ್ರಶಸ್ತಿ ಪತ್ರ ವಿತರಿಸಲಾಯಿತು.

ಕಬ್ಸ್ ಮತ್ತು ಬುಲ್ ಬುಲ್ಸ್‌ಗಳು ಒಟ್ಟು 202 ಮಕ್ಕಳು ಪ್ರಶಸ್ತಿ ಪಡೆದು ದಾಖಲೆ ನಿರ್ಮಿಸಿದ್ದಾರೆ. ಕಾರ್ಯಕಾರಿ ಸಮಿತಿ ಛೇರ್ಮನ್ ಶ್ರೀಮತಿ ಜಸ್ಟಿನ್ ಡಿ ಸೋಜಾ ಪ್ರಮಾಣ ಪತ್ರ ವಿತರಿಸಿದರು. ಸಹಾಯಕ ಆಯುಕ್ತರಾದ ಶ್ರೀಮತಿ ರೇಖಾರಾಣಿ ಮೆಡಲ್ ಹಾಕಿದರು. ಈ ಸಂದರ್ಭದಲ್ಲಿ ಫೌಂಡೇಷನ್ ಡೇ ಸ್ಟ್ಯಾಂಪ್ ಬಿಡುಗಡೆಗೊಳಿಸಲಾಯಿತು.

## ಜೈನ್ ಕಾಲೇಜಿನಲ್ಲಿ ರಾಜ್ಯೋತ್ಸವ



ದಾವಣಗೆರೆ, ನ.17- ಕನ್ನಡ ರಾಜ್ಯೋತ್ಸವದ ಅಂಗವಾಗಿ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನಲ್ಲಿ ಕನ್ನಡ ಹಬ್ಬ ಕಾರ್ಯಕ್ರಮ ನಡೆಯಿತು. ಪ್ರಾಂಶುಪಾಲರು ಮತ್ತು ನಿರ್ದೇಶಕರಾದ ಡಾ. ಡಿ.ಬಿ.ಗಣೇಶ್ ಮಾತನಾಡಿ, ಕನ್ನಡ ಭಾಷೆಯ ಮಹತ್ವ ಮತ್ತು ಸಂಸ್ಕೃತಿಯ ಕೊಡುಗೆಯನ್ನು ಸ್ಮರಿಸಿದರು.

## 21ರಂದು ಜಿಲ್ಲಾ ಮಟ್ಟದ ರೋಲರ್ ಸ್ಕೇಟಿಂಗ್‌ಗೆ ಆಯ್ಕೆ

ದಾವಣಗೆರೆ, ನ.17- 20ನೇ ಜಿಲ್ಲಾ ಮಟ್ಟದ ರೋಲರ್ ಸ್ಕೇಟಿಂಗ್ ಆಯ್ಕೆ ಸ್ಪರ್ಧೆಗಳು ಇದೇ ದಿನಾಂಕ 21ರ ಭಾನುವಾರ ನಗರದಲ್ಲಿ ನಡೆಯಲಿವೆ ಮತ್ತು 38ನೇ ರಾಜ್ಯಮಟ್ಟದ ಆಯ್ಕೆ ಸ್ಪರ್ಧೆಗಳು ಮಂಗಳೂರಿನಲ್ಲಿ ದಿನಾಂಕ 24 ರಿಂದ 28 ರವರೆಗೆ ನಡೆಯಲಿವೆ ಹಾಗೂ 59ನೇ ರಾಷ್ಟ್ರಮಟ್ಟದ ಆಯ್ಕೆ ಸ್ಪರ್ಧೆಗಳು ಡಿಸೆಂಬರ್ 11 ರಿಂದ 22 ರವರೆಗೆ ದೆಹಲಿಯಲ್ಲಿ ನಡೆಯಲಿವೆ.

ಜಿಲ್ಲಾ ಮಟ್ಟದಲ್ಲಿ ಆಯ್ಕೆ ಬಯಸುವ ಕ್ರೀಡಾಪಟುಗಳು ಇದೇ ದಿನಾಂಕ 20 ರ ಒಳಗಾಗಿ www.indiaskate.com ನಲ್ಲಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ ಅಥವಾ ಹೆಚ್ಚಿನ ವಿವರಗಳಿಗೆ ನ್ಯೂ ದಾವಣಗೆರೆ ಡಿಸ್ಟ್ರಿಕ್ಟ್ ರೋಲರ್ ಸ್ಕೇಟಿಂಗ್ ಅಸೋಸಿಯೇಷನ್‌ನ ಕಾರ್ಯದರ್ಶಿ ನಿರಂಜನ ಬಾಬು (ಮೊ: 98441 13656 ಗೆ) ಅವರನ್ನು ಸಂಪರ್ಕಿಸಬಹುದು. ಕೊಲಂಬಿಯಾದಲ್ಲಿ ನಡೆಯುತ್ತಿರುವ ವಿಶ್ವಮಟ್ಟದ ರೋಲರ್ ಸ್ಕೇಟಿಂಗ್ ಚಾಂಪಿಯನ್ ಶಿಪ್‌ನಲ್ಲಿ ಭಾರತದ (ತಮಿಳುನಾಡು) ವೇಲು ಕುಮಾರ್ ಆನಂದ್ ಕುಮಾರ್ ಅವರು ಭಾರತದ ರೋಲರ್ ಸ್ಕೇಟಿಂಗ್ ಇತಿಹಾಸದಲ್ಲಿ ಮೊದಲ ಬಾರಿಗೆ 15 ಕಿ.ಮೀ. ಎಲಿಮಿನೇಷನ್ ರೇಸ್‌ನಲ್ಲಿ ಬೆಳ್ಳಿ ಪದಕ ಪಡೆದುಕೊಂಡಿರುತ್ತಾರೆ. ಬೆಂಗಳೂರಿನ ಧನುಷ್ ಬಾಬು ಇವರು 500 ಮೀ ರೇಸ್‌ನಲ್ಲಿ 6ನೇ ಸ್ಥಾನ ಗಳಿಸಿರುತ್ತಾರೆ.

# 'ಎ' ಶ್ರೇಣಿಯಲ್ಲಿ ಮುಂದುವರೆದ ಶ್ರೀ ಶ್ರೀಶೈಲ ಕ್ರೆಡಿಟ್ ಸೊಸೈಟಿ

## ಸಂಘದ 27ನೇ ವರ್ಷದ ವಾರ್ಷಿಕ ಮಹಾಸಭೆಯಲ್ಲಿ ಸಹಕಾರಿಯ ಅಧ್ಯಕ್ಷ ಆರ್. ವೆಂಕಟರೆಡ್ಡಿ ಹರ್ಷ



ದಾವಣಗೆರೆ, ನ.17- ಪ್ರಗತಿಯನ್ನು ಕಾಯ್ದುಕೊಂಡು ಹೋಗುವುದರ ಮೂಲಕ ಆಡಿಟ್ ವರ್ಗೀಕರಣದಲ್ಲಿ 'ಎ' ಶ್ರೇಣಿಯನ್ನು ಪಡೆದುಕೊಂಡು, ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆ ಗಳಿಸಿರುವ ಸಂಘ ಎಂಬ ಹೆಗ್ಗಳಿಕೆಗೆ ಶ್ರೀ ಶ್ರೀಶೈಲ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಪಾತ್ರವಾಗಿದೆ ಎಂದು ಪ್ರಥಮ ದರ್ಜೆ ಗುತ್ತಿಗೆದಾರರೂ ಆಗಿರುವ ಸಂಘದ ಅಧ್ಯಕ್ಷ ಆರ್. ವೆಂಕಟರೆಡ್ಡಿ ಹರ್ಷ ವ್ಯಕ್ತಪಡಿಸಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಕಳೆದ ವಾರ ಏರ್ಪಾಡಾಗಿದ್ದ ಶ್ರೀ ಶ್ರೀಶೈಲ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ 27ನೇ ವರ್ಷದ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಳೆದ ಎರಡು ವರ್ಷಗಳಲ್ಲಿ ವಿಶ್ವವನ್ನೇ ತಲ್ಲಣಿಸಿದ ಕೊರೊನಾದಿಂದ ಆದ ಲಾಕ್‌ಡೌನ್ ಪರಿಣಾಮ ಎಲ್ಲಾ ವ್ಯವಹಾರಗಳು ಸ್ಥಗಿತಗೊಂಡಿದ್ದವಲ್ಲದೇ ಜನಜೀವನ ಅಸ್ತವ್ಯಸ್ತಗೊಂಡಿದ್ದರ ನಡುವೆಯೂ ಶ್ರೀ ಶ್ರೀಶೈಲ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಾಭದಾಯಕವಾಗಿ ಮುನ್ನಡೆದಿದೆ ಎಂದು ಅವರು ತಿಳಿಸಿದರು.

ಅಲ್ಲದೇ, ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಬ್ಯಾಂಕುಗಳು ಮತ್ತು ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಗಳಿಗೆ ಎದುರಾದ ಅನೇಕ ಸಮಸ್ಯೆಗಳ ಮಧ್ಯೆಯೂ ಶ್ರೀ ಶ್ರೀಶೈಲ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಾಭದಲ್ಲಿ ಮುನ್ನಡೆದಿದೆ ಎಂದರೆ ಅದಕ್ಕೆ ಗ್ರಾಹಕರು, ಷೇರುದಾರರು ಮತ್ತು ಠೇವಣಿದಾರರ ನಂಬಿಕೆ ಮತ್ತು ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ ಎಂದು ಅವರು ಪ್ರತಿಪಾದಿಸಿದರು.

ಸಂಘದ ಆರ್ಥಿಕ ಪಕ್ಷಿ ನೋಟವನ್ನು ಸಭೆಯ ಮುಂದಿಟ್ಟ ವೆಂಕಟರೆಡ್ಡಿ, 2021, ಮಾರ್ಚ್ ಅಂತ್ಯಕ್ಕೆ 25 ಲಕ್ಷ ರೂ. ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.10 ರಂತೆ ಲಾಭಾಂಶ ನೀಡಲು ಆಡಳಿತ ಮಂಡಳಿ ತೀರ್ಮಾನಿಸಿದೆ ಎಂದು ಅವರು ಸದಸ್ಯರ ಚಪ್ಪಾಳೆಗಳ ಮಧ್ಯೆ ಪ್ರಕಟಿಸಿದರು.

1.07 ಕೋಟಿ ರೂ. ಷೇರು ಬಂಡವಾಳ ಹೊಂದಿರುವ ಈ ಸಂಘವು, 13.10 ಕೋಟಿ ರೂ. ಠೇವಣಿ ಸಂಗ್ರಹಿಸಿದೆ. ಸದಸ್ಯರುಗಳ ಅಗತ್ಯ ಗಳಿಗನುಗುಣವಾಗಿ 12 ಕೋಟಿ ರೂ. ಸಾಲ ಸೌಲಭ್ಯ ಒದಗಿಸಲಾಗಿದ್ದು, 20.24 ಕೋಟಿ ರೂ. ದುಡಿಯುವ ಬಂಡವಾಳ ಹೊಂದಿದೆ. ಸಂಘದ ಹಿತದೃಷ್ಟಿಯಿಂದ 6.23 ಕೋಟಿ ರೂ. ಹೂಡಿಕೆ ಮಾಡಲಾಗಿದೆ ಎಂದು ಅವರು ಸಂಘದ ಪ್ರಗತಿಯನ್ನು ಮಾರ್ಮಿಕವಾಗಿ ವಿವರಿಸಿದರು.

ಸಂಘದ ಉಪಾಧ್ಯಕ್ಷ ವಿ.ಪ್ರಕಾಶ್ ಮಾತನಾಡಿ, ಗ್ರಾಹಕರ ಮತ್ತು ಠೇವಣಿದಾರರ ವಿಶ್ವಾಸ - ನಂಬಿಕೆ, ಷೇರುದಾರರ ಪ್ರೋತ್ಸಾಹ, ಸಿಬ್ಬಂದಿ ವರ್ಗದವರ ಕಾಳಜಿ, ಆಡಳಿತ ಮಂಡಳಿ ಸದಸ್ಯರ ಇಚ್ಛಾಶಕ್ತಿಯಿಂದಾಗಿ ಶ್ರೀ ಶ್ರೀಶೈಲ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಪ್ರಗತಿ ಮತ್ತು ಲಾಭದಾಯಕವಾಗಿ ಸಾಗಿದೆ ಎಂದು ತಿಳಿಸಿ, ಕೃತಜ್ಞತೆ ಸಲ್ಲಿಸಿದರು.


ಕಳೆದ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಯನ್ನು ವ್ಯವಸ್ಥಾಪಕ ಕೆ.ರಾಘವೇಂದ್ರ ರಾವ್ ಓದಿದರು. ಲಾಭ ವಿಂಗಡಣೆಯ ಮಾಹಿತಿಯನ್ನು ನಿರ್ದೇಶಕ ನಾಗೇಂದ್ರ ಎನ್. ಲದ್ವಾ ಸಭೆಗೆ ನೀಡಿದರು. ಮುಂಗಡ ಪತ್ರದ ವಿವರವನ್ನು ನಿರ್ದೇಶಕ ಟಿ.ಹೆಚ್. ರಾಜಶೇಖರ್ ಸಭೆಗೆ ಒದಗಿಸಿದರು.

ನಿರ್ದೇಶಕರುಗಳಾದ ಶ್ರೀಮತಿ ಎ.ಶ್ರೀದೇವಿ ತಿಮ್ಮಾರೆಡ್ಡಿ, ಕೆ.ನಾರಾಯಣ, ಬಿ.ವೆಂಕಟೇಶ್ವರ ರೆಡ್ಡಿ, ಬಿ.ಯೋಗಿರೆಡ್ಡಿ, ಬಿ. ವೆಂಕಟೇಶ್ವರ ರೆಡ್ಡಿ, ರಾಜಾನಾಯಕ್, ಶ್ರೀಮತಿ ವೈ.ಸರೋಜ ವೆಂಕಟೇಶ್ವರ ರೆಡ್ಡಿ ಅವರುಗಳು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ನಿರ್ದೇಶಕ ಕೆ.ಬಿ.ನಾಗರಾಜ್ ಸ್ವಾಗತಿಸಿದರು. ನಿರ್ದೇಶಕ ಮೇಕಾ ಮುರುಳಿಕೃಷ್ಣ ವಂದಿಸಿದರು. ಸಂಘದ ಮುಖ್ಯ ವ್ಯವಸ್ಥಾಪಕ ಬಿ.ರಾಮನಾರಾಯಣ ರೆಡ್ಡಿ ಕಾರ್ಯಕ್ರಮ ನಿರೂಪಿಸಿದರು.

### ಪಡಿತರ ವಿತರಣೆಯಲ್ಲಿ ಅಕ್ರಮ : ಆರೋಪ

## ಸಾಲು ಮರದ ವೀರಾಚಾರಿ ನೇತೃತ್ವದಲ್ಲಿ ಪ್ರತಿಭಟನೆ



ದಾವಣಗೆರೆ, ನ.17- ಹರಿಹರ ತಾಲ್ಲೂಕಿನ ಮಿಟ್ಲಕಟ್ಟೆ ಗ್ರಾಮದಲ್ಲಿ ಪಡಿತರ ವಿತರಣೆಯಲ್ಲಿ ಅಕ್ರಮ ಎಸಗಲಾಗಿದೆ ಎಂದು ಆರೋಪಿಸಿ, ಪರಿಸರ ಪ್ರೇಮಿ ಸಾಲು ಮರದ ವೀರಾಚಾರಿ ನೇತೃತ್ವದಲ್ಲಿ ಗ್ರಾಮಸ್ಥರು ಇಂದು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಮಿಟ್ಲಕಟ್ಟೆ ಗ್ರಾಮದಲ್ಲಿ ಪಡಿತರ ವಿತರಣೆಯ ಪರವಾನಿಗೆ ಪಡೆದಿರುವ ಸಿದ್ದರಾಮಪ್ಪ ಎಂಬಾತ ಕಳೆದ 20 ತಿಂಗಳಿನಿಂದ ಸಮರ್ಪಕವಾಗಿ ಪಡಿತರ ವಿತರಿಸದೇ ಅಕ್ರಮ ಎಸಗಿದ್ದಾರೆ. ಆದ್ದರಿಂದ ಇವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವ ಮೂಲಕ ಸಮರ್ಪಕ ಪಡಿತರ ವಿತರಣೆಗೆ ವ್ಯವಸ್ಥೆ ಮಾಡಬೇಕು ಎಂಬುದಾಗಿ ಮನವಿ ಸಹಿತ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಸಾಲುಮರದ ವೀರಾಚಾರಿ ಮತ್ತು ಗ್ರಾಮಸ್ಥರು ಕೋರಿದರು.

ಸರ್ಕಾರ ಯಾರೂ ಸಹ ಹಸಿವಿನಿಂದ ಇರಬಾರದು ಎಂಬ ಉದ್ದೇಶದಿಂದ ಬಡ ಜನರಿಗೆ ಪಡಿತರ ವ್ಯವಸ್ಥೆಯ ಮೂಲಕ ಉಚಿತ ಅಕ್ಕಿ ವಿತರಿಸುತ್ತಿದೆ. ಆದರೆ, ಇದರ ವಿತರಣೆ ಜವಾಬ್ದಾರಿ ಹೊಂದಿರುವ ಸಿದ್ದರಾಮಪ್ಪ ಎಂಬುವರು ಪಡಿತರ ಫಲಾನುಭವಿಗಳಿಗೆ ವಿತರಿಸುವ ಅಕ್ಕಿಯ ತೂಕದಲ್ಲಿ ಕಡಿಮೆ ಕೊಡುವ ಮೂಲಕ ಪ್ರತಿ ತಿಂಗಳು ಬಡವರಿಗೆ ಸೇರಬೇಕಾಗಿರುವ 15 ಕ್ವಿಂಟಾಲ್ ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಾಟ ಮಾಡುವ ಮೂಲಕ ಬಡವರಿಗೆ ಅನ್ಯಾಯವೆಸಗಿದ್ದಾರೆ ಎಂದು ಆಪಾದಿಸಿದರು.

ಈ ಸಂದರ್ಭದಲ್ಲಿ ನಾಗೇಂದ್ರಪ್ಪ, ಮನೋಜ್, ಸಿ. ನಿಂಗಪ್ಪ, ಮಲ್ಲೇಶ್, ಮಂಜಪ್ಪ, ರಾಜಪ್ಪ, ಶಶಿಧರ, ಅಂಜಿನಪ್ಪ, ಮಂಜಮ್ಮ ಸೇರಿದಂತೆ ಇತರರು ಇದ್ದರು.

## ನಗರದಲ್ಲಿ ಇಂದು - ನಾಳೆ ಲೋಕ ಕಲ್ಯಾಣಕ್ಕಾಗಿ ಧಾರ್ಮಿಕ ಅಧ್ಯಾತ್ಮ ಉತ್ಸವ

ದಾವಣಗೆರೆ, ನ.17- ಸ್ಪೂರ್ತಿ ಸೇವಾ ಟ್ರಸ್ಟ್ ದಾವಣಗೆರೆ, ಅಭಯಾಶ್ರಮ ಶಾಸ್ತ್ರಿಹಳ್ಳಿ, ಶ್ರೀ ಗಾಯತ್ರಿ ಪರಿವಾರ ಹಾಗೂ ಇಸ್ಕಾನ್ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಲೋಕ ಕಲ್ಯಾಣಕ್ಕಾಗಿ ಶ್ರೀರಾಮ ತಾರಕ ಯಜ್ಞ, ಶ್ರೀ ಗಾಯತ್ರಿ ಮಹಾಯಜ್ಞ, ಸಾಮೂಹಿಕ ಶ್ರೀ ಸತ್ಯನಾರಾಯಣ ವ್ರತ, ಶ್ರೀ ಕೃಷ್ಣ ನಾಮ ಕೀರ್ತನೆ, ಶ್ರೀ ದಾಮೋದರ ದೀಪೋತ್ಸವ, ಶ್ರೀ ತುಳಸಿ ಕಲ್ಯಾಣ, ಅಧ್ಯಾತ್ಮ ಉತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಾಗಿ ಸ್ಪೂರ್ತಿ ಸೇವಾ ಟ್ರಸ್ಟ್‌ನ ಸಂಸ್ಥಾಪಕ ಬಿ.ಸತ್ಯನಾರಾಯಣ ಮೂರ್ತಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಳೆ ದಿನಾಂಕ 18 ಹಾಗೂ ನಾಡಿದ್ದು ದಿನಾಂಕ 19 ರಂದು ಎರಡು ದಿನಗಳ ಕಾಲ ಕಾರ್ಯಕ್ರಮಗಳು ನಡೆಯಲಿದ್ದು, ಉದ್ಘಾಟನಾ ಸಮಾರಂಭವು ರಾಜನಹಳ್ಳಿ ಹನುಮಂತಪ್ಪ ಧರ್ಮಶಾಲೆಯಲ್ಲಿ ನಾಡಿದ್ದು ದಿನಾಂಕ 19ರ ಶುಕ್ರವಾರ ಮಧ್ಯಾಹ್ನ 12.30ಕ್ಕೆ ನಡೆಯಲಿದೆ ಎಂದು ಹೇಳಿದರು.

ಶ್ರೀ ಗಾಯತ್ರಿ ಪರಿವಾರದ ಅಧ್ಯಕ್ಷರಾದ ಡಾ.ಸುಶೀಲಮ್ಮ ಅಧ್ಯಕ್ಷತೆ ವಹಿಸಿದ್ದು, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ರಾಮಕೃಷ್ಣ ಮಿಷನ್ ಅಧ್ಯಕ್ಷರಾದ ಶ್ರೀ ತ್ಯಾಗೀಶಾನಂದ ಮಹಾರಾಜ್, ಇಸ್ಕಾನ್ ಸಂಸ್ಥೆ ಮುಖ್ಯಸ್ಥರಾದ ಅವಧೂತ ಚಂದ್ರದಾಸ್, ಅಭಯಾಶ್ರಮ ಅಧ್ಯಕ್ಷರಾದ ಆರ್. ಆರ್. ರಮೇಶ್ ಬಾಬು ಆಗಮಿಸಲಿದ್ದಾರೆ.

ಶ್ರೀ ಗಾಯತ್ರಿ ಪರಿವಾರದ ಸಂಚಾಲಕ ಭಾವನ್ನಾರಾಯಣ ಮಾತನಾಡಿ, ಆರ್.ಹೆಚ್. ಧರ್ಮಶಾಲೆಯ ಹೊರಾಂಗಣದ ಯಜ್ಞ ಶಾಲೆಯಲ್ಲಿ ಶ್ರೀ ರಾಮತಾರಕ ಯಜ್ಞ, ಶ್ರೀ ಗಾಯತ್ರಿ ಮಹಾಯಜ್ಞ ನಡೆಯಲಿದೆ. ಛತ್ರದ ಒಳಾಂಗಣದಲ್ಲಿ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ನಡೆಯಲಿದೆ. 18ರ ಸಂಜೆ 5.45ಕ್ಕೆ ಗರುಡ ಧ್ವಜಾರೋಹಣ, 6 ಗಂಟೆಯಿಂದ 20ನೇ ವರ್ಷದ ಶ್ರೀ ರಾಮ ತಾರಕ ಜಪ, ಅಖಂಡ 18 ಗಂಟೆಗಳ ಕಾಲ ನಿರಂತರವಾಗಿ ಜಪಯಜ್ಞ ನಡೆಯಲಿದೆ. 19ರ ಬೆಳಿಗ್ಗೆ 8.45ಕ್ಕೆ ಹೊರಾಂಗಣದ ಯಜ್ಞ ಶಾಲೆಯಲ್ಲಿ ಶ್ರೀ ಗಾಯತ್ರಿ ಮಹಾಯಜ್ಞ, ಶ್ರೀ ರಾಮತಾರಕ ಯಜ್ಞಗಳಿಗೆ ಸಂಕಲ್ಪ ಮಾಡಲಾಗುವುದು ಎಂದು ಮಾಹಿತಿ ನೀಡಿದರು. ಪತ್ರಿಕಾಗೋಷ್ಠಿಯಲ್ಲಿ ಸಾಲಿಗ್ರಾಮ ಗಣೇಶ್ ಶೆಣೈ, ಹೆಚ್.ಕೆ. ಮಂಜುನಾಥ್ ಉಪಸ್ಥಿತರಿದ್ದರು.


## ಯುವ ಕಾಂಗ್ರೆಸ್ ರಂಜಿತ್ ಉಪಾಧ್ಯಕ್ಷ



**ಹೊನ್ನಾಳಿ**

ಹೊನ್ನಾಳಿ, ನ.17- ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹೊನ್ನಾಳಿಯ ಎಚ್.ಎಸ್. ರಂಜಿತ್, ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಾಕ್ಷರಾಗಿ ನೇಮಕಗೊಂಡಿದ್ದಾರೆ.

## ತಮಿಳು ಬ್ರಾಹ್ಮಣ ಯುವಕರಿಗಾಗಿ ಉತ್ತರ ಪ್ರದೇಶದಲ್ಲಿ ವಧು ಶೋಧ



ಚೆನ್ನೈ, ನ. 17 – ತಮಿಳು ನಾಡಿನಲ್ಲಿ ಮದುವೆಗೆ ವಧುವನ್ನು ಪಡೆಯಲು ವಿಫಲವಾದ 40 ಸಾವಿರಕ್ಕೂ ಹೆಚ್ಚು ತಮಿಳುನಾಡಿನ ಬ್ರಾಹ್ಮಣ ಯುವಕರು, ಈಗ ಮದುವೆಗಾಗಿ ಉತ್ತರ ಪ್ರದೇಶ ಹಾಗೂ ಬಿಹಾರಗಳ ಕಡೆ ಮುಖ ಮಾಡಿದ್ದಾರೆ.

ನಮ್ಮ ಸಂಘದ ಮೂಲಕ ಉತ್ತರ ಪ್ರದೇಶ ಹಾಗೂ ಬಿಹಾರಗಳಲ್ಲಿ ಮದುವೆ ಹೆಣ್ಣು ಹುಡುಕಲು ವಿಶೇಷ ಅಭಿಯಾನ ನಡೆಸಿದ್ದೇವೆ ಎಂದು ತಮಿಳುನಾಡು ಬ್ರಾಹ್ಮಣರ ಒಕ್ಕೂಟವಾದ ಥಂಬ್ರಾಸ್ ಅಧ್ಯಕ್ಷ ಎನ್. ನಾರಾಯಣನ್ ಹೇಳಿದ್ದಾರೆ.

ಅಂದಾಜಿನ ಪ್ರಕಾರ 30-40 ವಯೋಮಾನದ 40 ಸಾವಿರಕ್ಕೂ ಹೆಚ್ಚು ತಮಿಳು ಬ್ರಾಹ್ಮಣ ಯುವಕರು ಮದುವೆಗೆ ಹೆಣ್ಣು ಸಿಗದೇ ಅವಿವಾಹಿತರಾಗಿದ್ದಾರೆ ಎಂದವರು ಅಂದಾಜಿಸಿದ್ದಾರೆ.

ತಮಿಳುನಾಡಿನಲ್ಲಿ ಹತ್ತು ಬ್ರಾಹ್ಮಣ ಹುಡುಗರಿಗೆ, ಆರು ಹುಡುಗಿಯರು ಮಾತ್ರ ಸಿಗುತ್ತಿದ್ದಾರೆ ಎಂದು ಸಂಘಟನೆ ತಿಳಿಸಿದೆ. ಈ ಹಿನ್ನಲೆಯಲ್ಲಿ ದೆಹಲಿ, ಲಖ್ನೌ ಹಾಗೂ ಪಾಟ್ನಾಗಳಲ್ಲಿ ಸಂಘಟನೆ ಸಮನ್ವಯಕಾರರನ್ನು ನೇಮಿಸಿ ಅಲ್ಲಿ ಬ್ರಾಹ್ಮಣ ಸಮು ದಾಯದ ಹುಡುಗಿಯರನ್ನು ಹುಡುಕುವ ಪ್ರಯತ್ನ ನಡೆಸಿದೆ. ಆದರೆ, ಬ್ರಾಹ್ಮಣ ಸಮುದಾಯ ದಲ್ಲಿ ಈ ಬಗ್ಗೆ ಏಕರೂಪದ ಅಭಿಪ್ರಾಯವಿಲ್ಲ.

ಶಿಕ್ಷಣ ಪರಿಣಿತ ಎಂ.ಪರಮೇಶ್ವರನ್ ಈ ಬಗ್ಗೆ ಮಾತನಾಡುತ್ತಾ, ವರನ ಕಡೆಯವರು ಅದ್ದೂರಿ ಮದುವೆ ಬಯಸುತ್ತಿರುವುದೂ ಸಹ ಹೆಣ್ಣು ಸಿಗದಿರಲು ಒಂದು ಕಾರಣ. ವಧುವಿನ ಕಡೆಯವರೇ ಮದುವೆಯ ಎಲ್ಲಾ ವೆಚ್ಚ ನಿಭಾಯಿಸಬೇಕು ಎಂಬುದು ಸಮಸ್ಯೆಗೆ ಕಾರಣವಾಗಿದೆ ಎಂದಿದ್ದಾರೆ.

ತಮಿಳು ಬ್ರಾಹ್ಮಣರು ಬೇರೆ ರಾಜ್ಯಗಳಲ್ಲಿ ಮದುವೆ ಮಾಡಿಕೊಳ್ಳುವುದು ಈಗ ಹೊಸದೇನೂ ಅಲ್ಲ. ಉತ್ತರ ಭಾರತೀಯರು ಹಾಗೂ ತಮಿಳು ಬ್ರಾಹ್ಮಣರ ನಡುವೆ ಮದುವೆಗಳು ನಡೆಯುವುದನ್ನು ಈಗಾಗಲೇ ನೋಡಿದ್ದೇವೆ ಎಂದು ವಧು ಹುಡುಕುತ್ತಿರುವ ಯುವಕ ಎ.ಅಜಯ್ ಹೇಳಿದ್ದಾರೆ.

## ಲಾಕ್‌ಡೌನ್ ವೇಳೆಯೂ ನಿರೀಕ್ಷೆಯಷ್ಟು ಕಡಿಮೆಯಾಗದ ವಾಯು ಮಾಲಿನ್ಯ

ಟೊರೊಂಟೊ, ನ. 17 – ಕೊರೊನಾದ ಮೊದಲ ಅಲೆಯ ಸಂದರ್ಭದಲ್ಲಿ ಹೇರಲಾಗಿದ್ದ ಲಾಕ್‌ಡೌನ್ ಸಮಯದಲ್ಲಿ ಭಾರತದಲ್ಲಿ ವಾಯುಮಾಲಿನ್ಯ ಮೊದಲು ಅಂದಾಜಿಸಿದಷ್ಟು ಕಡಿಮೆಯಾಗಿಲ್ಲ ಎಂದು ಅಧ್ಯಯನವೊಂದು ತಿಳಿಸಿದೆ.

ಕೆನಡಾದ ಯಾರ್ಕ್ ವಿಶ್ವವಿದ್ಯಾನಿಲಯದ ಸಂಶೋಧಕರು ನಡೆಸಿದ ಅಧ್ಯಯನದ ಪ್ರಕಾರ, ಕಳೆದ ವರ್ಷ ಲಾಕ್‌ಡೌನ್ ಹೇರಿದ ಸಂದರ್ಭದಲ್ಲಿ ವಾಹನಗಳ ಸಂಚಾರ ಇಲ್ಲದೇ ಸಹಜವಾಗಿಯೇ ಮಾಲಿನ್ಯ ಕಡಿಮೆಯಾಗಿದೆ.

ಆದರೆ, ಕಣ್ಣಿಗೆ ಸ್ವಚ್ಛ ವಾತಾವರಣ ಕಂಡರೂ ಸಹ ಆರೋಗ್ಯಕ್ಕೆ ಹಾನಿ ತರುವ ಅಂಶಗಳು ಉಳಿದೇ ಇವೆ. ವಾಯು ಮಾಲಿನ್ಯ ಮೊದಲು ನಿರೀಕ್ಷಿಸಿದ ಮಟ್ಟದಲ್ಲಿ ಕಡಿಮೆಯಾಗಿಲ್ಲ ಎಂದು ಎನ್ವಿರಾನ್ಮೆಂಟಲ್ ಸೈನ್ಸ್ : ಪ್ರೊಸೆಸಸ್ ಅಂಡ್ ಇಂಪ್ಯಾಕ್ಟ್ಸ್ ನಿಯತಕಾಲಿಕದಲ್ಲಿ ಪ್ರಕಟವಾದ ಅಧ್ಯಯನದಲ್ಲಿ ಹೇಳಲಾಗಿದೆ. ದೆಹಲಿ ಹಾಗೂ ಹೈದರಾಬಾದ್‌ಗಳಲ್ಲಿ ನಡೆಸಲಾದ ಅಧ್ಯಯನದ ಪ್ರಕಾರ ಪಿಎಂ 2.5 ದೂಳಿನ ಕಣಗಳ ಇಳಿಕೆ ಪ್ರಮಾಣ ಶೇ.8ಕ್ಕೂ ಕಡಿಮೆ ಇದೆ. ಇದನ್ನು ಪರಿಗಣಿಸಿದಾಗ ಗ್ರಾಮೀಣ ಹಾಗೂ ಕೃಷಿ ಮೂಲದಿಂದ ವಾತಾವರಣಕ್ಕೆ ಬರುವ ಮಾಲಿನ್ಯ ಮುಂದುವರೆದಿರುವುದು ಸ್ಪಷ್ಟವಾಗುತ್ತದೆ ಎಂದು ಅಧ್ಯಯನ ಹೇಳಿದೆ.

## ಮಲೇಬೆನ್ನೂರು ಹೋಬಳಿಯಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೊನ್ನಾಳಿ ಪ್ರಸರಣ ಮಾರ್ಗದಲ್ಲಿ ತುರ್ತು ಕಾಮಗಾರಿ ಇರುವುದರಿಂದ 66/11 ಕೆವಿ ಮಲೇಬೆನ್ನೂರು ಹಾಗೂ ನಂದಿಗುಡಿ ವಿ.ವಿ. ಕೇಂದ್ರದಿಂದ ವಿದ್ಯುತ್ ವಿತರಣೆ ಆಗುವ ಗ್ರಾಮಗಳಲ್ಲಿ ಇಂದು ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಶಾಖಾಧಿಕಾರಿ ಕೊಟ್ರೇಶ್ ತಿಳಿಸಿದ್ದಾರೆ.

## ರಂಭಾಪುರಿ ಪೀಠದಲ್ಲಿ ನಾಳೆ ಲಕ್ಷ ದೀಪೋತ್ಸವ



ಬಾಳೆಹೊನ್ನೂರು, ನ.17- ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠದಲ್ಲಿ ಶ್ರೀ ರಂಭಾಪುರಿ ಡಾ. ವೀರ ಸೋಮೇಶ್ವರ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನಾಡಿದ್ದು ದಿನಾಂಕ 19 ಶುಕ್ರವಾರ ಸಂಜೆ 7 ಗಂಟೆಗೆ ಕಾರ್ತಿಕ ಲಕ್ಷ ದೀಪೋತ್ಸವ ಹಾಗೂ ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ರಥೋತ್ಸವ ಜರುಗುವುದು.

### ಶ್ರೀ ವೀರಭದ್ರಸ್ವಾಮಿ ರಥೋತ್ಸವ

ಅಂದು ಬೆಳಿಗ್ಗೆ ಎಲ್ಲಾ ದೇವರಿಗೆ ವಿಶೇಷ ಪೂಜೆ ಜರುಗಲಿದೆ.

ದೀಪಾರಾಧನೆ ಸೇವೆಯನ್ನು ಶಿಗ್ಗಾಂವಿಯ ಲಲಿತಾಬಾಯಿ ಶಿವಪುತ್ರಯ್ಯ ಸುರಗೀಮಠ ಹಾಗೂ ವಿದ್ಯುತ್ ದೀಪಾಲಂಕಾರ ಸೇವೆಯನ್ನು ಹುಬ್ಬಳ್ಳಿಯ ವೀರೇಶ್ ಪಾಟೀಲ ಮತ್ತು ಬಾಳೆಹೊನ್ನೂರು, ಬಸಾಪುರ ಕಡವಂತಿ ಸದ್ಭಕ್ತರು ನೆರವೇರಿಸುವರು.

## ಜಿಲ್ಲೆಯಲ್ಲಿ ಮಳೆ : 63.50 ಲಕ್ಷ ರೂ. ನಷ್ಟ ಹಾನಿ

ದಾವಣಗೆರೆ, ನ.17- ಜಿಲ್ಲೆಯಲ್ಲಿ ಎರಡು ದಿನಗಳಿಂದ ಭಾರೀ ಮಳೆಯಾಗಿದ್ದು, ಒಟ್ಟು ರೂ. 63.50 ಲಕ್ಷ ರೂ. ನಷ್ಟವಾಗಿದೆ ಎಂದು ಅಂದಾಜು ಮಾಡಲಾಗಿದೆ.

ನಗರದಲ್ಲಿ 05.61 ಮಿ.ಮೀ, ಚನ್ನಗಿರಿ 19.48 ಮಿ.ಮೀ, ಹರಿಹರ 19.30 ಮಿ.ಮೀ, ಹೊನ್ನಾಳಿ 27.80 ಮಿ.ಮೀ, ಜಗಳೂರು 20.80 ಮಿ.ಮೀ ವಾಸ್ತವ ಮಳೆಯಾಗಿದೆ. ತಾಲ್ಲೂಕಿನಲ್ಲಿ 20 ಎಕರೆ ಭತ್ತದ ಬೆಳೆ ಹಾನಿಯಾಗಿದ್ದು ರೂ.2.50 ಲಕ್ಷ ಅಂದಾಜು ನಷ್ಟ ಸಂಭವಿಸಿರುತ್ತದೆ.

ಹರಿಹರ ತಾಲ್ಲೂಕು ವ್ಯಾಪ್ತಿಯಲ್ಲಿ 1 ಕಚ್ಚಾ ಮನೆಗೆ ಭಾಗಶ: ಹಾನಿಯಾಗಿದ್ದು, 30 ಸಾವಿರ ರೂ. ಹಾಗೂ 695 ಎಕರೆ ಭತ್ತದ ಬೆಳೆ ಹಾನಿಯಾಗಿದ್ದು ರೂ.55.60 ಲಕ್ಷ ಹಾನಿಯಾಗಿದೆ. ಒಟ್ಟು ರೂ.55.90 ಲಕ್ಷ ಅಂದಾಜು ನಷ್ಟ ಸಂಭವಿಸಿದೆ.

ಜಿಲ್ಲೆ ವ್ಯಾಪ್ತಿಯಲ್ಲಿ ಸುಮಾರು 11 ಮನೆಗಳು ಹಾನಿಯಗಿದ್ದು, ಒಟ್ಟು 7.30 ಲಕ್ಷ ರೂ. ನಷ್ಟದ ಅಂದಾಜು ಮಾಡಲಾಗಿದೆ. ಸರ್ಕಾರದ ಮಾರ್ಗಸೂಚಿ ಅನ್ವಯ ಸಂತ್ರಸ್ತರಿಗೆ ಪರಿಹಾರ ವಿತರಿಸಲು ಕ್ರಮ ವಹಿಸಲಾಗುವುದೆಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.





॥ ಶ್ರೀ ಮಾಲತೇಶ ಪ್ರಸನ್ನ॥ ॥ಶ್ರೀ ಮೈಲಾರಲಿಂಗೇಶ್ವರ ಪ್ರಸನ್ನ॥ ॥ಶ್ರೀ ರೇಣುಕಾ ಎಲ್ಲಮ್ಮದೇವಿ ಪ್ರಸನ್ನ॥

ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ 1008

ಬಸವರಾಜ ಪಟ್ಟದಾರ್ಯ ಮಹಾಸ್ವಾಮಿಗಳು ಗುಳೇದಗುಡ್ಡ.

ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳು, ಕನಕ ಗುರುಪೀಠ ಕಾಗಿನೆಲೆ. ಇವರ ದಿವ್ಯಸಾನ್ನಿಧ್ಯದಲ್ಲಿ ಜರುಗುವ

**ನೂತನ ಕಾಂಪ್ಲೆಕ್ಸ್ ಪ್ರಾರಂಭೋತ್ಸವ ಆಮಂತ್ರಣ**

ದಿ॥ ಶ್ರೀ ಮತಿ ಲಕ್ಷ್ಮಮ್ಮ ದಿ॥ ಮಾಲತೇಶಪ್ಪ ಚಿನ್ನಿಕಟ್ಟಿ ಇವರ ಆಶೀರ್ವಾದದೊಂದಿಗೆ

ಶ್ರೀಮತಿ ರತ್ನಾ ಶ್ರೀ ಈಶ್ವರ ಚಿನ್ನಿಕಟ್ಟಿ ಸಾ॥ ರಾಣೇಬೆನ್ನೂರು

ಇವರು ಮಾಡುವ ವಿಜ್ಞಾಪನೆಗಳು.

ಪೂನಾ-ಬೆಂಗಳೂರು ರಸ್ತೆ, ಕುರಿ ಉಣ್ಣೆ ಆಫೀಸ್ ಪಕ್ಕ ನಿರ್ಮಿಸಿರುವ

"ಶ್ರೀ ರೇಣುಕಾ-ಮಾಲತೇಶ ಕೃಪಾ" ಕಾಂಪ್ಲೆಕ್ಸ್ ಉದ್ಘಾಟನೆ ಹಾಗೂ

ಶ್ರೀ ಸಾಲೇಶ್ವರ ಪಟ್ಟಜ್ಯೋತಿ ಚಿಟ್ಸ್ ಪ್ರೈ.ಲಿ.,

ಪ್ರಾರಂಭೋತ್ಸವ

ಪೂಜಾ ಸಮಾರಂಭ :

ಸರ್ವರಿಗೂ ಆದರದ ಆಮಂತ್ರಣ

ದಿನಾಂಕ : 18.11.2021 ರ ಗುರುವಾರ ಬೆಳಿಗ್ಗೆ 10-30 ಕ್ಕೆ

ತಮ್ಮ ಆಗಮನಾಭಿಲಾಷಿಗಳು :

ಶ್ರೀ ಮತಿ ರತ್ನಾ, ಶ್ರೀ ಈಶ್ವರ ಎಂ. ಚಿನ್ನಿಕಟ್ಟಿ

ಶ್ರೀ ಮತಿ ಅನ್ನಪೂರ್ಣ ಶ್ರೀ ಕರಬಸಪ್ಪ ಜಿ. ಚಿನ್ನಿಕಟ್ಟಿ

ಶ್ರೀ ರೇಣುಕಾ ಆಟೋಮೊಬೈಲ್ ರಾಣೇಬೆನ್ನೂರು.

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.



**ಬೇಕಾಗಿದ್ದಾರೆ**

Diploma in Hardware Networking / Software ಆದವರು ಬೇಕಾಗಿದ್ದಾರೆ.

ಅನುಭವವುಳ್ಳ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ.

ಎ.ಕೆ. ಫಾರ್ಮದಲ್ಲಿ ಸ್ಟಾಕ್ ತೆಗೆಯಲು PUC / Diploma / Degree ಆದ ಉತ್ಸಾಹಿ ಯುವಕರು ಬೇಕಾಗಿದ್ದಾರೆ.

ಆಯ್ಕೆ ಆದ ಅಭ್ಯರ್ಥಿಗಳಿಗೆ, ಆಕರ್ಷಕ ವೇತನ, PF, ESI ಮತ್ತು Gratuity ಸೌಲಭ್ಯಗಳು ಹಾಗೂ ಕಾರ್ಪೋರೇಟ್ ತರಬೇತಿ ಇರುತ್ತದೆ.

ಸಂಪರ್ಕಿಸಿ : ಎ.ಕೆ. ಫಾರ್ಮ

ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.



**JOB VACANCY**

One of the leading company in Davanagere Requires the following personnel.

**ACCOUNTANT (Male Candidate)**

Qualification:
Bcom / Mcom / MBA Finance

Experience : 3 years in Accounts
(Excellent in Tally & Excel)

Interested candidates can email their profiles to
davanagerejobs@gmail.com
Or Whatsapp:- 9380350327

# ಮನುಷ್ಯನ ಅಂತರಂಗ ಶುದ್ಧಿಗಾಗಿ ಬೇಕು ದೇವಸ್ಥಾನಗಳು

## ಕನಗೊಂಡನಹಳ್ಳಿ ಧಾರ್ಮಿಕ ಸಮಾರಂಭದಲ್ಲಿ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮೀಜಿ



ದಾವಣಗೆರೆ, ನ.17- ದಾನವನನ್ನು ಮಾನವನನ್ನಾಗಿ, ಮಾನವನನ್ನು ಮಹಾದೇವನನ್ನಾಗಿ ವ್ಯಕ್ತಿತ್ವ ವಿಕಸನಗೊಳಿಸಲು ಭಗವಂತನ ಆರಾಧನೆ ಬೇಕು. ಅದಕ್ಕಾಗಿ ಗ್ರಾಮಗಳಲ್ಲಿ ದೇವಸ್ಥಾನಗಳು ಇರಬೇಕು ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮೀಜಿ ಪ್ರತಿಪಾದಿಸಿದರು.

ತಾಲ್ಲೂಕಿನ ಕನಗೊಂಡನಹಳ್ಳಿ ಗ್ರಾಮದಲ್ಲಿ ಬುಧವಾರ ಶ್ರೀ ಮಹೇಶ್ವರ ಸ್ವಾಮಿ, ಶ್ರೀ ನಂದೀಶ್ವರ ಸ್ವಾಮಿ ಶಿಲಾಮೂರ್ತಿ ಸ್ಥಾಪನೆ, ಪ್ರಾಣ ಪ್ರತಿಷ್ಠಾಪನೆ ಹಾಗೂ ಧಾರ್ಮಿಕ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಶಿಕ್ಷಣಕ್ಕೆ ಶಾಲೆ, ಆರೋಗ್ಯಕ್ಕೆ ಆಸ್ಪತ್ರೆ, ಜನ-ಜಾನುವಾರಗಳಿಗೆ ಕೆರೆ-ಹಳ್ಳಗಳು ಇರುವಂತೆ ಭಗವಂತನ ಸಾನ್ನಿಧ್ಯಕ್ಕೆ ದೇವಸ್ಥಾನಗಳು ಅತ್ಯಗತ್ಯ. ಮನುಷ್ಯನ ಅಂತರಂಗ ಶುದ್ಧಿಯಲ್ಲಿ ದೇವಸ್ಥಾನದ ಪಾತ್ರ ಅನಾದಿ ಕಾಲದಿಂದಲೂ ನಮ್ಮ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿದೆ. ಇಂತಹ ದೇವಸ್ಥಾನಗಳಲ್ಲಿ ದೇವರನ್ನು ಪ್ರಾರ್ಥಿಸಿ ಅಂತರಂಗದ ಜ್ಞಾನದ ಅರಿವು ಹೆಚ್ಚಿಸುತ್ತಾ, ಭಗವಂತನಿಗೆ ಪ್ರಿಯವಾಗುವ ಬದುಕು ಕಟ್ಟಿಕೊಳ್ಳಬೇಕು ಎಂದು ನುಡಿದರು.

ಮಾನವನ ಭೌತಿಕ ಬದುಕು ದೇವರಿಗೆ ಪ್ರೀತಿಯಾಗಬೇಕಾದರೆ ಪರರನ್ನು ದ್ವೇಷಿಸುವುದನ್ನು ಬಿಡಬೇಕು. ಕೈ ಒಡ್ಡಿ ಬೇಡದೆ ಕಾಯಕದಲ್ಲಿ ನಿಷ್ಠೆಯನ್ನಿಟ್ಟುಕೊಂಡು ದುಡಿಯಬೇಕು. ಬಂದ ಸಂಪತ್ತಿನಲ್ಲಿ ದೇಹಿ ಎಂದು ಬಂದವರಿಗೆ ಕೈ ಎತ್ತಿ ದಾನ ಮಾಡಬೇಕು. ದೀನರು, ದುರ್ಬಲರು, ಅಸಹಾಯಕರಿಗೆ ನೆರವಾಗಬೇಕು. ಧರ್ಮದಲ್ಲಿ ನಂಬಿಕೆ ಇಡಬೇಕು. ಹೆತ್ತವರನ್ನು, ಹಿರಿಯರನ್ನು ಗೌರವಿಸಬೇಕು ಎಂದು ಹೇಳಿದರು.

ಯಾರಿಗೂ ತೊಂದರೆ ನೀಡದೆ ಎಲ್ಲರಿಗೂ ಬೇಕಾದ ವ್ಯಕ್ತಿಯಾಗಿ, ಸಜ್ಜನನಾಗಿ ಸಮಾಜದಲ್ಲಿ ಗುರುತಿಸಿಕೊಳ್ಳುವ ಮೂಲಕ ಭಕ್ತಿ ಮಾರ್ಗದಲ್ಲಿ ಸಾಗಿದಾಗ ವ್ಯಕ್ತಿ ಸಮಾಜಕ್ಕೆ ಬೇಕಾಗುತ್ತಾನೆ. ಇಲ್ಲಿ ಸಲ್ಲುವವನು ಅಲ್ಲಿಯೂ ಸಲ್ಲುತ್ತಾನೆ ಎಂಬಂತೆ ಭಗವಂತನಿಗೆ ಪ್ರಿಯನಾಗುತ್ತಾನೆ ಎಂದು ಶ್ರೀಗಳು ಕಿವಿ ಮಾತು ಹೇಳಿದರು.

ಇದೇ ಸಂದರ್ಭದಲ್ಲಿ ಶ್ರೀ ಮಹೇಶ್ವರ ಸ್ವಾಮಿ ಹಾಗೂ ಶ್ರೀ ನಂದೀಶ್ವರ ಸ್ವಾಮಿ ಮೂರ್ತಿ ತಯಾರಕರು ಹಾಗೂ ಗ್ರಾಮದ ಹಿರಿಯರು ಗುರು ರಕ್ಷೆ ಪಡೆದರು.

ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಎ.ಕೆ. ಗಂಗಮ್ಮ, ಸದಸ್ಯರಾದ ಗೀತಾ, ಗಣೇಶ್, ಬಸವರಾಜಪ್ಪ ಕೂಲಂಬಿ, ಗ್ರಾಮದ ಮುಖಂಡರುಗಳಾದ ಸತ್ತೂರು ನಿಂಗಪ್ಪ, ಕೆ. ಎನ್. ಬಸವರಾಜಪ್ಪ, ಎಂ.ಆರ್. ಶಿವಾನಂದಯ್ಯ, ಚನ್ನವೀರಪ್ಪ, ಮಲ್ಲಿಕಾರ್ಜುನ್, ಎಂ.ಉಮಾಪತಿ, ಕೆ.ಎಸ್. ವೀರೇಶ್ ಇತರರು ಉಪಸ್ಥಿತರಿದ್ದರು. ಶಿಕ್ಷಕ ಕೆ.ಆರ್. ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು. ಸಿದ್ದಲಿಂಗಸ್ವಾಮಿ ಹಿರೇಮಠ್ ಅತಿಥಿಗಳನ್ನು ಸ್ವಾಗತಿಸಿದರು. ಜಗದೀಶ್ ವಂದಿಸಿದರು.

### ದೇವಸ್ಥಾನಗಳ ಶುಚಿಯೇ ದೇವರ ಪ್ರಥಮ ಸೇವೆ

ದೇವಸ್ಥಾನಗಳನ್ನು ಕಟ್ಟುವುದು ದೊಡ್ಡದಲ್ಲ. ದೇವಸ್ಥಾನಗಳನ್ನು ಶುಚಿಯಾಗಿಡುವುದೇ ದೇವರಿಗೆ ಸಲ್ಲಿಸುವ ಪ್ರಥಮ ಸೇವೆ ಎಂದು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಗ್ರಾಮಸ್ಥರಿಗೆ ಕಿವಿ ಮಾತು ಹೇಳಿದರು.

ದೇವಸ್ಥಾನಗಳಲ್ಲಿ ಧನಾತ್ಮಕವಾದ ದೈವಿಕ ಶಕ್ತಿ ಇರುತ್ತದೆ. ಆದ ಕಾರಣ ಅಲ್ಲಿ ಹರಟೆ ಹೊಡೆಯುವ ಅಥವಾ ಜೂಜಾಡುವ ಕೆಲಸ ಮಾಡದೆ ಶಾಂತತೆ ಕಾಪಾಡಿಕೊಳ್ಳಬೇಕು. ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದರು.

# ದಾವಣಗೆರೆ ವಿವಿಯ 2021-22 ಸಾಲಿನ ವಿವಿಧ ಪದವಿ ಕೋರ್ಸ್‌ಗಳಿಗೆ ಅರ್ಜಿ

ದಾವಣಗೆರೆ, ನ.17- ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ 2021-22 ತಮ್ಮ ಸಾಲಿನಲ್ಲಿ ವಿವಿಧ ಸ್ನಾತಕ ಕೋರ್ಸ್‌ಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಬಿಎ, ಬಿ.ಕಾಂ, ಬಿಎಸ್ಸಿ ಮತ್ತು ಬಿಬಿಎ ಪದವಿಗಳಿಗೆ ಇದೇ ದಿನಾಂಕ 25 ರವರೆಗೆ ಅರ್ಜಿ ಸಲ್ಲಿಸಲು ವಿಸ್ತರಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆಯಬೇಕೆಂದು ವಿವಿಯ ಕುಲಸಚಿವರು ತಿಳಿಸಿದ್ದಾರೆ.

ಎನ್‌ಇಪಿ - 2020 ಮಾದರಿಯಲ್ಲಿ ಉತ್ತಮ ತಯಾರಿಯೊಂದಿಗೆ ಪದವಿ ಕೋರ್ಸ್‌ಗಳು ಆರಂಭವಾಗುತ್ತಿವೆ.

ರಾಷ್ಟ್ರೀಯ ಶಿಕ್ಷಣ ನೀತಿ 2020ರ ಪಠ್ಯಕ್ರಮದ ಅನುಗುಣವಾಗಿ ವಿಷಯವಾರು ಪಠ್ಯಕ್ರಮಗಳನ್ನು ಸಿದ್ಧಪಡಿಸಲಾಗಿದೆ. ಈ ಪದವಿಯು ಮೂರು - ನಾಲ್ಕು ವರ್ಷದ ಅವಧಿಯಾಗಿದ್ದು, ವಿದ್ಯಾರ್ಥಿಯು ಮೊದಲನೇ ವರ್ಷದ ನಂತರ ಕೋರ್ಸ್‌ನಿಂದ ಹೊರಬರಲು ಇಚ್ಛಿಸಿದರೆ ಪ್ರಮಾಣ ಪತ್ರ ನೀಡಲಾಗುವುದು. ಎರಡನೇ ವರ್ಷದ ನಂತರ ಹೊರಬರಲು ಇಚ್ಛಿಸಿದ್ದಲ್ಲಿ ಡಿಪ್ಲೋಮಾ ಪ್ರಮಾಣ ಪತ್ರ ನೀಡಲಾಗುವುದು. ಮೂರು ವರ್ಷದ ನಂತರ ಪದವಿ ಪತ್ರ ನೀಡಲಾಗುವುದು. ವಿದ್ಯಾರ್ಥಿಯು ಸಂಪೂರ್ಣವಾಗಿ ಎಂಟು ಸೆಮಿಸ್ಟರ್ ಉತ್ತೀರ್ಣರಾದ ನಂತರ ಹಾನರ್ಸ್ ಪದವಿ ಕೋರ್ಸನ್ನು ನೀಡಲಾಗುವುದು.



## ಬೋಳಚಟ್ಟಿ ಶ್ರೀ ಚೌಡೇಶ್ವರಿ ದೇವಿಗೆ ಅರಿಶಿನ - ಕುಂಕುಮ ಅಲಂಕಾರ

ದಾವಣಗೆರೆ, ನ.17 - ಚೌಡೇಶ್ವರಿ ನಗರದಲ್ಲಿರುವ ಬೋಳಚಟ್ಟಿ ಶ್ರೀ ಚೌಡೇಶ್ವರಿ ದೇವಿ ದೇವಸ್ಥಾನದಲ್ಲಿ ದೇವಿಗೆ ಅರಿಶಿನ-ಕುಂಕುಮದಲ್ಲಿ ವಿಶೇಷವಾಗಿ ಅಲಂಕಾರಿಸಲಾಗಿತ್ತು.

## ಪೂರ್ಣ ಲಸಿಕೆ ಪಡೆದವರ ಸಂಖ್ಯೆ ಹೆಚ್ಚಳ

ನವದೆಹಲಿ, ನ. 17 - ದೇಶದಲ್ಲಿ ಇದೇ ಮೊದಲ ಬಾರಿಗೆ ಪೂರ್ಣ ಲಸಿಕೆ ಪಡೆದವರ ಸಂಖ್ಯೆ ಮೊದಲ ಲಸಿಕೆ ಪಡೆದವರಿಗಿಂತ ಹೆಚ್ಚಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಹೇಳಿದ್ದಾರೆ. ದೇಶದಲ್ಲಿ ಇದುವರೆಗೂ 113.68 ಕೋಟಿ ಡೋಸ್ ಲಸಿಕೆಯನ್ನು ನೀಡಲಾಗಿದೆ. ಇದರಲ್ಲಿ ಎರಡೂ ಡೋಸ್ ಪಡೆದವರ ಸಂಖ್ಯೆ 38.11 ಕೋಟಿ ಆಗಿದೆ. ಒಂದೇ ಡೋಸ್ ಪಡೆದವರ ಸಂಖ್ಯೆ ದೇಶದಲ್ಲೀಗ 37.45 ಕೋಟಿ ಎಂದವರು ಹೇಳಿದ್ದಾರೆ.

ಕಳೆದ ಎರಡು ದಿನಗಳಿಂದ ನಗರವೂ ಸೇರಿದಂತೆ ಜಿಲ್ಲೆಯ ಹಲವೆಡೆ ಅಕಾಲಿಕ ಮಳೆ ಬೀಳುತ್ತಿದ್ದು, ಕಟಾವಿಗೆ ಬಂದ ಭತ್ತದ ಬೆಳೆಯನ್ನು ಆಹುತಿ ತೆಗೆದುಕೊಳ್ಳುವ ಮೂಲಕ ರೈತಾಪಿ ವರ್ಗವನ್ನು ಕಂಗಾಲಾಗಿಸಿದೆ. ಮತ್ತೊಂದೆಡೆ ನಗರದಲ್ಲಿ ಚೇತರಿಕೆ ಹಾದಿಯಲ್ಲಿದ್ದ ವ್ಯವಹಾರಗಳನ್ನು ಕುಂಠಿತಗೊಳಿಸಿದೆ. ಕೊರೊನಾದಿಂದ ಮುಚ್ಚಲ್ಪಟ್ಟಿದ್ದ ಶಾಲೆಗಳು ಇತ್ತೀಚೆಗಷ್ಟೇ ಆರಂಭವಾಗಿದ್ದು, ಮಕ್ಕಳು ಪಠ್ಯ ಪುಸ್ತಕಗಳನ್ನೇ ತಲೆ ಮೇಲೆ ಹೊತ್ತು ಸಾಗುತ್ತಿರುವ ದೃಶ್ಯ.




# ಆರೋಗ್ಯ ಕೇಂದ್ರಕ್ಕೆ ಬೀಗ ಜಡಿದು ಪ್ರತಿಭಟಿಸಿದ ಹೆಬ್ಬಾಳ್ ಗ್ರಾಮಸ್ಥರು



**ರೋಗಿಗಳ ಸೇವೆಗೆ ಸಿಗದ ಹಿನ್ನೆಲೆ**

ದಾವಣಗೆರೆ, ನ.17- ರೋಗಿಗಳ ಸೇವೆಗೆ ಸಿಗದ ಹಿನ್ನೆಲೆಯಲ್ಲಿ ಹೆಬ್ಬಾಳ್ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಗ್ರಾಮಸ್ಥರು ಬೀಗ ಜಡಿದಿದ್ದ ಹಿನ್ನೆಲೆಯಲ್ಲಿ ಗ್ರಾಮಾಂತರ ಪೊಲೀಸರು ಸಮಸ್ಯೆಗೆ ಪರಿಹಾರ ನೀಡಿದ್ದಾರೆ.

ತಾಲ್ಲೂಕಿನ ಹೆಬ್ಬಾಳ್ ಗ್ರಾಮದ ಆರೋಗ್ಯ ಕೇಂದ್ರದಲ್ಲಿ ನಿರ್ವಹಣೆ ಕಾಣದೇ ಲಕ್ಷಾಂತರ ಮೌಲ್ಯದ ಶಸ್ತ್ರಚಿಕಿತ್ಸಾ ಕೊಠಡಿ, ಯಂತ್ರಗಳು ಧೂಳು ಹಿಡಿದಿದ್ದವು. ಆಸ್ಪತ್ರೆ ವೈದ್ಯರು, ಶುಶ್ರೂಷಕರು, ಸಿಬ್ಬಂದಿ ಹಾಜರಾತಿಗೆ ಸಹಿ ಮಾಡಿ, ಕರ್ತವ್ಯದ ಅವಧಿಯಲ್ಲೂ ಆಸ್ಪತ್ರೆಯಲ್ಲಿರದೇ ರೋಗಿಗಳು ಪರದಾಡುವಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ ಗ್ರಾಮಸ್ಥರು ಮಂಗಳವಾರ ಆಸ್ಪತ್ರೆಗೆ ಬೀಗ ಜಡಿದಿದ್ದರು.

ಇಂದೂ ಸಹ ಆಸ್ಪತ್ರೆ ಮುಂದೆ ಜಮಾಯಿಸಿದ್ದ ಗ್ರಾಮದ ಮುಖಂಡರು ಬೇಜವಾಬ್ದಾರಿ ತೋರುವ ವೈದ್ಯರು, ಶುಶ್ರೂಷಕರು, ಸಿಬ್ಬಂದಿ ನಮಗೆ ಬೇಡ. ರೋಗಿಗಳಿಗೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಬೇಕೆಂದು ಪಟ್ಟು ಹಿಡಿದರು.

ಆರೋಗ್ಯ ಕೇಂದ್ರದತ್ತ ಆಗಮಿಸಿದ ಗ್ರಾಮಾಂತರ ಠಾಣೆಯ ಎಎಸ್‌ಐ ರಮೇಶ್‌ಕುಮಾರ್, ಕಾನ್‌ಸ್ಟೇಬಲ್ ಅಣ್ಣಪ್ಪ, ಗ್ರಾಮಸ್ಥರ ಅಹವಾಲು ಆಲಿಸಿ ದರು. ಅಲ್ಲದೇ, ಕರ್ತವ್ಯದ ವೇಳೆ ಆಸ್ಪತ್ರೆಯಲ್ಲಿ ಕೆಲಸ ಮಾಡಿದರೆ ಇಷ್ಟೆಲ್ಲಾ ಸಮಸ್ಯೆ ಆಗುವುದಿಲ್ಲ ಎಂದು ಆಸ್ಪತ್ರೆ ವೈದ್ಯರು, ಶುಶ್ರೂಷಕರು, ಸಿಬ್ಬಂದಿಗೆ ತಿಳಿ ಹೇಳಿದರು.

ಮುಂದೆ ಸರಿಯಾಗಿ ಕೆಲಸ ಮಾಡಿಕೊಂಡು ಹೋಗುತ್ತೇವೆ. ಗ್ರಾಮಸ್ಥರಿಂದ ಯಾವುದೇ ದೂರು ಬರದಂತೆ ರೋಗಿಗಳ ಆರೈಕೆ ಮಾಡುವುದಾಗಿ ವೈದ್ಯಾಧಿಕಾರಿ ಡಾ. ರಮೇಶ್ ಇತರೆ ಸಿಬ್ಬಂದಿ ಹೇಳಿದ ನಂತರವಷ್ಟೇ ಗ್ರಾಮಸ್ಥರು ಆಸ್ಪತ್ರೆಯ ಬೀಗ ತೆರೆಯಲು ಸಮ್ಮತಿಸಿದರು.

ಗ್ರಾ.ಪಂ ಸದಸ್ಯರಾದ ಬಸವರಾಜಪ್ಪ, ಮಹಾರುದ್ರಯ್ಯ, ಮಹಾಂತೇಶ, ಗ್ರಾಮಸ್ಥರಾದ ಯಲ್ಲೇಶ, ವಾಗೀಶ, ರುದ್ರೇಶ, ಪ್ರಕಾಶ, ವಿಜಯಕುಮಾರ ಸೇರಿದಂತೆ ಇತರರು ಇದ್ದರು.

## ನಗರಕ್ಕಿಂದು ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜು

ರಾಜ್ಯ ನಗರಾಭಿವೃದ್ಧಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ. ಬೆಳಿಗ್ಗೆ 9.30 ಕ್ಕೆ ನಗರಕ್ಕಾಗಮಿಸುವ ಸಚಿವರು, ಜಿಎಂಐಟಿ ಅತಿಥಿ ಗೃಹಕ್ಕೆ ತೆರಳುವರು.

ನಂತರ 11 ಕ್ಕೆ ಪಕ್ಷದ ವತಿಯಿಂದ ಆಯೋಜಿಸಲಾಗಿರುವ ಜನ ಸ್ವರಾಜ್ ಯಾತ್ರೆ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಒಂಬತ್ತನೇ ವರ್ಷದ ಪುಣ್ಯಸ್ಮರಣೆ



ದಿ. ಶ್ರೀ ಆರ್.ಎಲ್. ಹನುಮಂತಪ್ಪನವರು
ಹಿರಿಯ ಕಾರ್ಮಿಕ ಧುರೀಣರು, ನಗರಸಭೆ ಪ್ರಭಾರ ಮಾಜಿ ಅಧ್ಯಕ್ಷರು,
ಕುರುಹಿನಶೆಟ್ಟಿ ಸಮಾಜದ ಹಿರಿಯ ಮುಖಂಡರು.

ನೀವು ನಮ್ಮನ್ನಗಲಿ ಇಂದಿಗೆ ಒಂಬತ್ತು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ,
ನೀವು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಧರ್ಮಪತ್ನಿ : ಶ್ರೀಮತಿ ರತ್ನಮ್ಮ ಹನುಮಂತಪ್ಪ ಮತ್ತು ಪುತ್ರರು,
ಸೊಸೆಯಂದಿರು, ಪುತ್ರಿ, ಅಳಿಯ, ಮೊಮ್ಮಕ್ಕಳು,
ಮರಿಮೊಮ್ಮಕ್ಕಳು, ಸಹೋದರರು ಹಾಗೂ ಬಂಧು-ಮಿತ್ರರು.

- ರಕ್ಷಿತಾ ಸ್ಟೀಲ್ಸ್, ಸಿಮೆಂಟ್ ಅಂಡ್ ಪೇಂಟ್ಸ್
- ಶ್ರೀ ಚಾಮುಂಡೇಶ್ವರಿ ಚಿತ್ರಮಂದಿರ, ನಿಟುವಳ್ಳಿ
- ಆರ್.ಎಲ್.ಹೆಚ್. ರೈಸ್ ಇಂಡಸ್ಟ್ರೀಸ್
- ದರ್ಶನ್ ಸ್ಟೀಲ್ಸ್ ಅಂಡ್ ಸಿಮೆಂಟ್
- ಸ್ಪಿರಿಟ್ಸ್ ವೈನ್ ಶಾಪ್ MRP, ಶಾಮನೂರು ರೋಡ್, ದಾವಣಗೆರೆ
- ಕಾಕ್ಟೈಲ್ ವೈನ್ಸ್ MRP, ಡೆಂಟಲ್ ಕಾಲೇಜು ರಸ್ತೆ, ದಾವಣಗೆರೆ
- ಸಂತೋಷ್ ಬಾರ್ ಅಂಡ್ ರೆಸ್ಟೋರೆಂಟ್
- ಪೂರ್ಣಿಮಾ ಬಾರ್ ಅಂಡ್ ರೆಸ್ಟೋರೆಂಟ್
- ಚಾಮುಂಡಿ ಬಾರ್ & ರೆಸ್ಟೋರೆಂಟ್, ಮಂಡಿಪೇಟೆ, ದಾವಣಗೆರೆ

ಚಾಮುಂಡಿ ಶಿವಗಂಗಾ ಬಾರ್ & ಪಾರ್ಸಲ್ MRP
ಹದಡಿ ರೋಡ್, ದಾವಣಗೆರೆ




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte